## ಅಧ್ಯಾಯ–೯
# ಶಿಕ್ಷಣ ಮತ್ತು ಕ್ರೀಡೆ

ಮೈಸೂರು ಪ್ರದೇಶದಲ್ಲಿ ಪೂರ್ವದಲ್ಲಿ ಗುರುಕುಲ ಪದ್ಧತಿ ರೂಢಿಯಲ್ಲಿ ಇದ್ದು, ಶಿಕ್ಷಣಕ್ಕೆ ಅದೇ ಮೂಲವಾಗಿದ್ದಿತು. ಪವಿತ್ರ ಧಾರ್ಮಿಕ ಗ್ರಂಥಗಳ ಕಂಠಪಾಠ ಮಾಡಿ ಅದನ್ನು ಅದರ ಶುದ್ಧ ಸ್ವರೂಪದಲ್ಲಿ ಮುಂದಿನ ಪೀಳಿಗೆಗೆ ಬೋಧಿಸುವುದು ಶಿಕ್ಷಣದ ಕ್ರಮವಾಗಿದ್ದಿತು. ಬರವಣಿಗೆ ಇನ್ನೂ ಅಸ್ತಿತ್ವದಲ್ಲಿಲ್ಲದಿದ್ದಾಗ ಈ ಬಗೆಯ ಬೋಧನೆ ನಡೆಯುತ್ತಿದ್ದಿತು. ನಂತರದಲ್ಲಿ ಧರ್ಮಗ್ರಂಥಗಳ ಪಾಠದ ಜೊತೆಗೆ ಪುರಾಣಗಳು, ಗೀತೆ ಮುಂತಾದವು ಪಠ್ಯಕ್ರಮದಲ್ಲಿ ಸೇರಿಕೊಂಡವು. ಶಿಕ್ಷಣದ ಉದ್ದೇಶ, ಪಠ್ಯಕ್ರಮ, ಪರೀಕ್ಷೆ ಮುಂತಾದ ಅಂಶಗಳನ್ನು ನಿರ್ಧರಿಸತಕ್ಕ ಯಾವ ಸರ್ಕಾರಿ ಸಂಸ್ಥೆಯೂ ಹಿಂದೆ ಅಸ್ತಿತ್ವದಲ್ಲಿ ಇರಲಿಲ್ಲ. ಎಲ್ಲವೂ ಗುರುಗಳ ವೈಯಕ್ತಿಕ ಮೇಲ್ವಿಚಾರಣೆಯಲ್ಲಿ ನಡೆಯುತ್ತಿತ್ತು.

ಪ್ರಾಚೀನ ಕಾಲದಲ್ಲಿ ಪ್ರಾಥಮಿಕ ಶಿಕ್ಷಣ ಬಹುಮಟ್ಟಿಗೆ ಮನೆಯಲ್ಲಿ ತಂದೆಯ ಮೂಲಕ ನಡೆಯುತ್ತಿತ್ತು. ವಿದ್ಯಾರಂಭ ಸಂಸ್ಕಾರದ ನಂತರ ಮಕ್ಕಳು ಅಕ್ಷರಾಭ್ಯಾಸ ಆರಂಭಿಸುತ್ತಿದ್ದರು. ೧೨–೧೩ನೆಯ ವಯಸ್ಸಿನಲ್ಲಿ ಏರ್ಪಡುತ್ತಿದ್ದ ಉಪನಯನಾನಂತರ ವಿದ್ಯಾರ್ಥಿಗಳು ಗುರುಗಳ ಮನೆಯಲ್ಲಿ ವಿದ್ಯಾಭ್ಯಾಸ ಮುಂದುವರಿಸುತ್ತಾ ಬ್ರಹ್ಮಚರ್ಯದ ಜೀವನ ನಡೆಸುತ್ತಿದ್ದರು. ಇದು ಹಿಂದೂ ಪದ್ಧತಿಯಲ್ಲಿ ಆಚರಣೆಯಲ್ಲಿದ್ದರೆ, ಬೌದ್ಧ ಶಿಕ್ಷಣಕ್ಕೆ ವಿದ್ಯಾರ್ಥಿಗಳು ಮಠ, ವಿಹಾರ ಅಥವಾ ಸಂಘಾರಾಮಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಹಾರಗಳಲ್ಲಿ ಉನ್ನತ ಶಿಕ್ಷಣವನ್ನು ಪಡೆಯುತ್ತಿದ್ದರು. ಮುಸಲ್ಮಾನರ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಸೀದಿಗಳಲ್ಲಿ ನೀಡಲ್ಪಡುತ್ತಿದ್ದು ಇಂತಹವುಗಳನ್ನು ಕ್ರಮವಾಗಿ ಮಕ್ತಬ್ ಹಾಗೂ ಮದ್ರಸಾಗಳೆಂದು ಕರೆಯುತ್ತಿದ್ದರು. ಆನಂತರ ಹೈದರ್ ಅಲಿ ಹಾಗೂ ಟಿಪ್ಪೂಸುಲ್ತಾನ್ ಕಾಲದಲ್ಲಿ ಮುಸ್ಲಿಂ ಶಿಕ್ಷಣದ ಪ್ರಚಾರ ವ್ಯಾಪಕವಾಗಿ ನಡೆಯಿತು.

ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಕೂಲಿಮಠಗಳಲ್ಲಿ ಹಾಗೂ ಗುರುಕುಲಗಳಲ್ಲಿ ಮಕ್ಕಳಿಗೆ ಓದು ಬರಹ ಕಲಿಸಲು ಮಕ್ಕಳ ಪೋಷಕರು

ಧನ ಧಾನ್ಯಗಳ ರೂಪದಲ್ಲಿ ಬೋಧಕರಿಗೆ ಸಂಭಾವನೆ ನೀಡುತ್ತಿದ್ದರು. ಶ್ರೀಮಂತರು ತಮ್ಮ ಮಕ್ಕಳ ವಿಧ್ಯಾಭ್ಯಾಸಕ್ಕೆ ತಮ್ಮ ತಮ್ಮ ಮನೆಗಳಲ್ಲಿಯೇ ಶಿಕ್ಷಣ ನೀಡುವ ಏರ್ಪಾಡು ಮಾಡಿಕೊಂಡಿದ್ದರು. 'ಕೂಲಿಮಠ' ಗಳೆಂದು ಕರೆಯಲ್ಪಡುತ್ತಿದ್ದ ಊರಿನ ಶಾಲೆಗಳು ಸಾಮಾನ್ಯವಾಗಿ ಛತ್ರ, ಚಾವಡಿ ಅಥವಾ ದೇವಸ್ಥಾನಗಳ ಜಗಲಿಗಳ ಮೇಲೆ ನಡೆಯುತ್ತಿದ್ದವು. ಓದು, ಬರಹ, ಗಣಿತಗಳೇ ಅಲ್ಲದೆ ರಾಮಾಯಣ, ಮಹಾಭಾರತ, ಭಗವದ್ಗೀತೆ ಹಾಗೂ ಭಾಗವತ ಪಠಣವನ್ನು ಹೇಳಿಕೊಡಲಾಗುತ್ತಿತ್ತು.

**ಆಧುನಿಕ ಶಿಕ್ಷಣ :** ೧೯ನೆಯ ಶತಮಾನದ ಆರಂಭದ ಹೊತ್ತಿಗೆ ಭಾರತ ಬಹುಮಟ್ಟಿಗೆ ಬ್ರಿಟಿಷರ ಅಳ್ವಿಕೆಗೆ ಒಳಪಟ್ಟಿತು. ಕರ್ನಾಟಕದಲ್ಲಿ ಟಿಪ್ಪೂ ಸುಲ್ತಾನನ ಮರಣಾನಂತರ ಮೈಸೂರು ಪ್ರಾಂತ ಒಡೆಯರ ಮನೆತನಕ್ಕೆ ಬಂದರೂ ಅದಕ್ಕೆ ಸೇರಿದ್ದ ಇತರ ಭಾಗಗಳು ವಿವಿಧ ಆಡಳಿತಕ್ಕೆ ಸೇರಿಹೋದವು. ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಹಿಂದು ಅರಸರು ಆಳುತ್ತಿದ್ದರು, ಅವರೆಲ್ಲ ಸ್ವಲ್ಪ ಕಾಲ ಅಧಿಕಾರದಲ್ಲಿದ್ದುದರ ಫಲವಾಗಿ ದೇಶೀಯ ಶಿಕ್ಷಣ ಪದ್ಧತಿಗೆ ಪ್ರೋತ್ಸಾಹ ಕಡಿಮೆಯಾಯಿತು. ಜೊತೆಗೆ ಆಗತಾನೆ ಆಡಳಿತ ಯಂತ್ರವನ್ನು ನಡೆಸುತ್ತಿದ್ದ ಬ್ರಿಟಿಷ್ ಸರ್ಕಾರಕ್ಕೆ ಇಂಗ್ಲೀಷು ಬಲ್ಲ ಸ್ಥಳೀಯರ ಅಗತ್ಯವಿತ್ತು, ಅಲ್ಲದೆ, ಇಂಗ್ಲಿಷ್ ಶಿಕ್ಷಣ ಪದ್ಧತಿ ಜನತೆಗೆ ಆಕರ್ಷಕವಾಗಿ ಕಂಡಿತು. ಇದಕ್ಕೆ ಪೂರಕವಾಗಿ ಮೈಸೂರು ಸಂಸ್ಥಾನದ ಮುಮ್ಮಡಿ ಕೃಷ್ಣರಾಜ ಒಡೆಯರು ೧೮೩೩ರಲ್ಲಿ ಮೈಸೂರು ನಗರದಲ್ಲಿ 'ರಾಜಾಸ್ ಸ್ಕೂಲ್' ಎಂಬ ಇಂಗ್ಲಿಷ್ ಶಾಲೆಯೊಂದನ್ನು ಸ್ಥಾಪಿಸಿದರು.

೧೮೫೪ರಲ್ಲಿ ಬ್ರಿಟಿಷ್ ಶಿಕ್ಷಣ ಕಾರ್ಯದರ್ಶಿಯಾಗಿದ್ದ ಚಾರ್ಲ್ಸ್‌ವುಡ್ ವರದಿಯ ನಂತರ ಭಾರತದಲ್ಲಿ ಉಂಟಾದ ಹೊಸ ಶಿಕ್ಷಣ ನೀತಿ ರಾಜ್ಯದ ಎಲ್ಲೆಡೆ ತನ್ನ ಪ್ರಭಾವ ಬೀರಿತು. ಮೈಸೂರು ಸಂಸ್ಥಾನದಲ್ಲಿ ೧೮೫೭ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಪ್ರಾರಂಭವಾಯಿತು. ಶಿಕ್ಷಣ ಇಲಾಖೆ ರೂಪಿಸಿದ ಇಂಗ್ಲೀಷ್ ಮಾದರಿಯ ಪಠ್ಯಕ್ರಮ ಜಾರಿಗೆ ಬಂದಿತಲ್ಲದೆ ಅಧ್ಯಾಪಕರ ತರಬೇತಿಗಾಗಿ ನಾರ್ಮಲ್ ಶಾಲೆಗಳು ಪ್ರಾರಂಭಗೊಂಡವು. ಸಂಸ್ಥಾನದ ಕೇಂದ್ರ ಹಾಗೂ ತಾಲೂಕಿನ ಕೇಂದ್ರವಾದ ಮೈಸೂರು ನಗರದಲ್ಲೇ ಇವೆಲ್ಲ ಪ್ರಥಮವಾಗಿ ಪ್ರಾರಂಭವಾದವು.

ಮೈಸೂರಿನ ಮುಖ್ಯ ನ್ಯಾಯಾಧೀಶರಾಗಿದ್ದ ಡೆವರೋ ಅವರು ಸರ್ಕಾರದ ಅದೇಶದಂತೆ, ಮೈಸೂರು ಮತ್ತು ಕೊಡಗು ಭಾಗಗಳಿಗೆ, ಆಧುನಿಕ ವಿದ್ಯಾ ಪದ್ಧತಿಯ ಜಾರಿಗಾಗಿ ಯೋಜನೆಯೊಂದನ್ನು ತಯಾರಿಸಿದರು. ಇದರಿಂದಾಗಿ ೧೮೬೧-೭೦ರಲ್ಲಿ ಈ ತಾಲೂಕಿನ ಬಹುತೇಕ ಹೋಬಳಿಗಳಲ್ಲಿ ಶಾಲೆಗಳು ಪ್ರಾರಂಭವಾದವು. ೧೯೧೩ರಿಂದ ಕಡ್ಡಾಯ ಶಿಕ್ಷಣದ ಕಡೆಗೆ ಸರ್ಕಾರ ಗಮನ ಹರಿಸಿ ಪ್ರತಿ ಹಳ್ಳಿಯಲ್ಲೂ ಶಾಲಾ ಕಮಿಟಿಗಳನ್ನು ನೇಮಿಸಿತು. ೧೯೩೦ರಲ್ಲಿ ಸರ್ಕಾರ ಪ್ರಾಥಮಿಕ ಶಿಕ್ಷಣ ಕಾಯಿದೆ ಜಾರಿಗೊಳಿಸಿತು. ಮೈಸೂರು ಸರ್ಕಾರ ೧೯೪೧ರಲ್ಲಿ ಪ್ರಾಥಮಿಕ ಶಿಕ್ಷಣ ಕಾನೂನನ್ನು ಜಾರಿಗೆ ತಂದು ಪ್ರಾಥಮಿಕ ಶಾಲೆಗಳನ್ನು ತಾನೇ ವಹಿಸಿಕೊಂಡಿತು.

**ಪೂರ್ವ ಪ್ರಾಥಮಿಕ ಶಿಕ್ಷಣ :** ಪ್ರಾಥಮಿಕ ಶಾಲೆಗಳಿಗೆ ನೋಂದಣಿಗೊಳ್ಳುವುದಕ್ಕೆ ಮೊದಲಿನ ಹಂತವನ್ನು ನರ್ಸರಿ ಇಲ್ಲವೇ ಪೂರ್ವ ಪ್ರಾಥಮಿಕ ಹಂತ ಎಂದು ಪರಿಗಣಿಸಲಾಗಿದ್ದು, ಅಂಗನವಾಡಿ ಕೇಂದ್ರಗಳು ಆ ಕಾರ್ಯವನ್ನು ಇಂದು ಯಶಸ್ವಿಯಾಗಿ ನಿರ್ವಹಿಸುತ್ತಿವೆ. ಹಿಂದೆ ಇವನ್ನು ಶಿಶುವಿಹಾರಗಳೆಂದು ಕರೆಯಲಾಗುತ್ತಿದ್ದು, ೧೯೮೭ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೧೮೦ ಶಿಶುವಿಹಾರಗಳು ಕಾರ್ಯನಿರ್ವಹಿಸುತ್ತಿದ್ದವು. ಅದೇ ೧೯೯೪ರ ಮಾರ್ಚ್ ಅಂತ್ಯಕ್ಕೆ ೧೯೬ ಶಿಶುವಿಹಾರಗಳಿದ್ದವು. ೧೯೯೬ – ೧೨೫ಕ್ಕೆ ಇಳಿದ ಇವುಗಳ ಸಂಖ್ಯೆ ಮುಂದೆ ೨೦೦೨ರ ಅಂತ್ಯಕ್ಕೆ ೩೧೧ಕ್ಕೆ ಏರಿದವು. ೨೦೦೯ರ ಮಾರ್ಚ್ ಅಂತ್ಯಕ್ಕೆ ಒಟ್ಟು ೪೨೪ ಅಂಗನವಾಡಿ ಕೇಂದ್ರಗಳು ತಾಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದವು.

**ಪ್ರಾಥಮಿಕ ಶಿಕ್ಷಣ :** ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಮಾರ್ಗೋಪಾಯಗಳನ್ನು ಸೂಚಿಸಲು ಅಂದಿನ ಸರ್ಕಾರ ೧೯೩೭ರಲ್ಲಿ ಸಮಿತಿಯೊಂದನ್ನು ರಚಿಸಿ ಪ್ರಾಥಮಿಕ ಶಿಕ್ಷಣವನ್ನು ಸರ್ಕಾರವೇ ವಹಿಸಿಕೊಳ್ಳುವುದು ಸೂಕ್ತವೆಂದು ಶಿಫಾರಸ್ಸು ಮಾಡಿತು. ಅದರಂತೆ ಸರ್ಕಾರ ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದೊರೆಯುವ ವ್ಯವಸ್ಥೆ ಮಾಡಿತು. ಸ್ಥಳೀಯ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ದಿಶೆಯಲ್ಲಿ ಗಮನಾರ್ಹ ಸೇವೆ ಸಲ್ಲಿಸಿವೆ. ಪ್ರಾಥಮಿಕ ಹಂತದ ವಿದ್ಯಾಭ್ಯಾಸ ಕ್ರಮವನ್ನು ಉತ್ತಮ ಪಡಿಸಲು ೧೯೪೧ರಲ್ಲಿ ಪ್ರಾಥಮಿಕ ಶಿಕ್ಷಣ ಕಾಯ್ದೆಯನ್ನು ಸರ್ಕಾರ ಜಾರಿಗೊಳಿಸಿತು. ಇದರಂತೆ ಪಟ್ಟಣ ಪ್ರದೇಶಗಳಲ್ಲಿ ೫೦೦ ಮಂದಿ ಪ್ರಜಾಸಂಖ್ಯೆಗೂ ಗ್ರಾಮಾಂತರ ಪ್ರದೇಶದಲ್ಲಿ ೩೦೦ ಮಂದಿ ಪ್ರಜಾಸಂಖ್ಯೆಗೂ ತಲಾ ಒಂದರಂತೆ ಒಂದರಿಂದ ನಾಲ್ಕನೇ ತರಗತಿಗಳನ್ನೊಳಗೊಂಡ ಕಿರಿಯ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಯಿತು. ಈ ಶಾಲೆಗಳಲ್ಲಿ ಭಾಷೆಗಳ ಜೊತೆಗೆ ಚರಿತ್ರೆ, ಭೂಗೋಳ, ಗಣಿತ, ಸಂಗೀತ, ಪ್ರಕೃತಿ ಪಾಠ ಹಾಗೂ ನೀತಿಪಾಠಗಳನ್ನು ಬೋಧಿಸಲಾಗುತ್ತಿತ್ತು. ಮೇಲಿನ ನಾಲ್ಕು ತರಗತಿಗಳ ಆನಂತರ ಶಿಕ್ಷಣ ಮುಂದುವರೆಸಲು ಮೂರು ವರ್ಷ ಅವಧಿಯ ಮಾಧ್ಯಮಿಕ ಶಾಲೆಗಳನ್ನು ನೂತನ ಮಾದರಿ ಮಾಧ್ಯಮಿಕ ಶಾಲೆ (ಎನ್.ಟಿ.ಎಂ.ಎಸ್.)ಗಳೆಂಬ ಹೆಸರಿನಲ್ಲಿ ಪ್ರಾರಂಭಿಸಲಾಯಿತು. ೧೯೬೧ರ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆಯಲ್ಲಿ ಈ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ೧೯೬೧–೬೨ರಿಂದ ಪ್ರಾರಂಭಿಸಿ ೧೯೬೫–೬೬ರ ಒಳಗಿನ ಅವಧಿಯಲ್ಲಿ ೬ ರಿಂದ ೧೧ ವರ್ಷ ವಯೋಮಾನದ ಎಲ್ಲಾ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ, ಉಚಿತವಾಗಿಯೂ ನೀಡಬೇಕೆಂದು ಆಜ್ಞೆ ಮಾಡಿತು. ಇತ್ತೀಚಿನ ದಶಕಗಳಲ್ಲಿ ಸರ್ಕಾರದ ನೂತನ ಶಿಕ್ಷಣ ಯೋಜನೆಗಳಡಿ ಪ್ರಾಥಮಿಕ ಶಿಕ್ಷಣಕ್ಕೆ ವ್ಯಾಪಕ ಉತ್ತೇಜನ ದೊರಕಿ ತಾಲೂಕಿನಲ್ಲಿ ಗಣನೀಯ ಪ್ರಗತಿ ಸಾಧಿಸಿದೆ. ಮೈಸೂರು ತಾಲೂಕಿನಲ್ಲಿ ೨೦೦೪–೦೫ರಲ್ಲಿ ೬೫೭ ಪ್ರಾಥಮಿಕ ಶಾಲೆಗಳಿದ್ದು, ೭೩೦೮೯ ಹುಡುಗರು ಹಾಗೂ ೭೫೯೯೪ ಹುಡುಗಿಯರಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೬೭೧ ಪ್ರಾಥಮಿಕ ಶಾಲೆಗಳಿದ್ದು, ೭೨,೯೭೫ ಬಾಲಕರು ಹಾಗೂ ೭೧,೨೭೫ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ಸರ್ವಶಿಕ್ಷಣ

ಅಭಿಯಾನ, ಅಕ್ಷರದಾಸೋಹ ಮುಂತಾದ ಯೋಜನೆಗಳ ಮೂಲಕ ಮಕ್ಕಳನ್ನು ಪ್ರಾಥಮಿಕ ಶಾಲೆಗಳಿಗೆ ಸೆಳೆಯಲು ಸರ್ಕಾರವು ಪ್ರಯತ್ನಿಸುತ್ತಿದೆ.

**ಪ್ರೌಢಶಿಕ್ಷಣ :** ಸ್ವಾತಂತ್ರ್ಯಾನಂತರ ರಚಿತವಾದ ಶಿಕ್ಷಣ ಆಯೋಗಗಳಾದ ಡಾ. ರಾಧಾಕೃಷ್ಣನ್ ಆಯೋಗ (೧೯೪೮), ಸೆಕೆಂಡರಿ ಶಿಕ್ಷಣ ಆಯೋಗ (೧೯೫೩) ಮತ್ತು ಕೊಠಾರಿ ಶಿಕ್ಷಣ ಆಯೋಗ (೧೯೬೪)ಗಳು ನಡೆಸಿದ ಚಿಂತನೆಗಳಿಂದಲೂ ನೀಡಿದ ಸಲಹೆಗಳಿಂದಲೂ ಶಿಕ್ಷಣಕ್ಷೇತ್ರ ವಿಸ್ತಾರಗೊಂಡು ಸೂಕ್ತ ಬದಲಾವಣೆ ತಳೆದವು. ನಾಲ್ಕು ವರ್ಷದ ಪ್ರಾಥಮಿಕ ಹಂತ, ಮೂರು ವರ್ಷದ ಮಾಧ್ಯಮಿಕ ಹಂತ, ಮೂರು ವರ್ಷದ ಪ್ರೌಢ ಹಾಗೂ ಎರಡು ವರ್ಷದ ಪದವಿ ಪೂರ್ವ ಶಿಕ್ಷಣ ಹಂತಗಳು ಶಿಫಾರಸ್ಸಾಗಿ ಜಾರಿಗೊಂಡವು. ಜಿಲ್ಲಾಕೇಂದ್ರವಾದ ಮೈಸೂರಿನಲ್ಲಿ ಹಿಂದೆ ಪ್ರಾರಂಭಗೊಂಡ ಹಲವಾರು ಶಾಲೆಗಳು ಇಂದಿಗೂ ಕಾರ್ಯನಿರ್ವಹಿಸುತ್ತಿವೆ. ಅವೆಂದರೆ, ಮಹಾರಾಜ ಪ್ರೌಢಶಾಲೆ (೧೮೩೩), ಹಾರ್ಡ್‌ವಿಕ್ ಪ್ರೌಢಶಾಲೆ (೧೮೫೪), ಮರಿಮಲ್ಲಪ್ಪ ಶಾಲೆ (೧೮೭೧), ಮಹಾರಾಣಿ ಪ್ರೌಢಶಾಲೆ (೧೮೮೨), ಬನುಮಯ್ಯ ಪ್ರೌಢಶಾಲೆ (೧೯೧೮), ಶಾರದಾವಿಲಾಸ ಪ್ರೌಢಶಾಲೆ (೧೯೧೯), ವಾಣಿವಿಲಾಸ ಅರಸು ಬಾಲಕಿಯರ ಪ್ರೌಢಶಾಲೆ (೧೯೩೭), ಮಹಾಜನ ಪ್ರೌಢಶಾಲೆ (೧೯೩೭), ಸೇಂಟ್ ಫಿಲೋಮಿನಾ ಪ್ರೌಢಶಾಲೆ (೧೯೪೨), ಕ್ರೈಸ್ತ ದಿ ಕಿಂಗ್ ಬಾಲಕಿಯರ ಪ್ರೌಢಶಾಲೆ (೧೯೪೪), ಗುಡ್ ಶೆಫರ್ಡ್ ಪ್ರೌಢಶಾಲೆ (೧೯೪೫), ದಳವಾಯಿ ಪ್ರೌಢಶಾಲೆ (೧೯೪೫), ವಿದ್ಯಾವರ್ಧಕ ಪ್ರೌಢಶಾಲೆ (೧೯೪೯), ಸೇಂಟ್ ಮೇರಿ ಬಾಲಕಿಯರ ಪ್ರೌಢಶಾಲೆ (೧೯೪೯) ಶ್ರೀರಾಮಕೃಷ್ಣ ಪ್ರೌಢಶಾಲೆ (೧೯೫೩), ನ್ಯಾಷನಲ್ ಬಾಲಕಿಯರ ಪ್ರೌಢಶಾಲೆ (೧೯೫೫), ಸಾರ್ವಜನಿಕ ಪ್ರೌಢಶಾಲೆ (೧೯೫೭), ಅವಿಲಾ ಕಾನ್ವೆಂಟ್ ಬಾಲಕಿಯರ ಪ್ರೌಢಶಾಲೆ (೧೯೫೮), ಪುರಸಭಾ ಬಾಲಕಿಯರ ಪ್ರೌಢಶಾಲೆ (೧೯೫೯), ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಪ್ರೌಢಶಾಲೆ (೧೯೬೧), ಶಾರದಾವಿಲಾಸ ಬಾಲಕಿಯರ ಪ್ರೌಢಶಾಲೆ (೧೯೬೧), ಶಿವರಾತ್ರೇಶ್ವರ ಬಾಲಕಿಯರ ಪ್ರೌಢಶಾಲೆ (೧೯೬೨), ಫರೂಕಿಯಾ ಪ್ರೌಢಶಾಲೆ (೧೯೬೧) ಹಾಗೂ ಶ್ರೀಕಾಂತ ಬಾಲಿಕಾ ಪ್ರೌಢಶಾಲೆ (೧೯೬೩). ತಾಲೂಕಿನಲ್ಲಿ ೨೦೦೪–೦೫ರಲ್ಲಿದ್ದಂತೆ, ೨೧೭ ಪ್ರೌಢಶಾಲೆಗಳಲ್ಲಿ ೨೮೭೬೧ ಬಾಲಕರು, ೨೪೪೧೪ ಬಾಲಕಿಯರಿದ್ದರು. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೨೭೨ ಪೌಢಶಾಲೆಗಳು ಕಾರ್ಯ ನಿರ್ವಹಿಸುತ್ತಿದ್ದು, ೨೭,೮೪೪ ಬಾಲಕರು ಹಾಗೂ ೨೬,೮೯ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು.

**ಪದವಿಪೂರ್ವ ಶಿಕ್ಷಣ:** ೧೯೭೧–೭೨ನೇ ಸಾಲಿನಲ್ಲಿ ಎರಡು ವರ್ಷದ ಪಿ.ಯು.ಸಿ. ಶಿಕ್ಷಣ ಕ್ರಮ ಕರ್ನಾಟಕದಾದ್ಯಂತ ಜಾರಿಯಾಯಿತು. ಪ್ರಥಮದರ್ಜೆ ಕಾಲೇಜುಗಳಲ್ಲಿ ಹಾಗೂ ಹೈಯರ್ ಸೆಕೆಂಡರಿ ಶಾಲೆಗಳಲ್ಲಿ ನಡೆಯುತ್ತಿದ್ದ ಒಂದು ವರ್ಷದ ಪಿ.ಯು.ಸಿ. ತರಗತಿಗಳು ರದ್ದಾದವು. ನೂತನ ಶಿಕ್ಷಣ ಪದ್ಧತಿಯನ್ವಯ ೧೦+೨+೩ ರ ಶಿಕ್ಷಣ ನಿಯಮ ಜಾರಿಯಾಯಿತು. ಶೈಕ್ಷಣಿಕ ವರ್ಷ ೧೯೭೭ರಲ್ಲಿ ಎರಡು ಭಾಷೆ ಹಾಗೂ ನಾಲ್ಕು ಐಚ್ಛಿಕ ವಿಷಯಗಳನ್ನೊಳಗೊಂಡ ಪಠ್ಯಕ್ರಮ ಪ್ರಾರಂಭಗೊಂಡು ಪದವಿಪೂರ್ವ

ಕಾಲೇಜುಗಳ ಆಡಳಿತ ನೋಡಿಕೊಳ್ಳಲು ಪದವಿ ಪೂರ್ವ ಶಿಕ್ಷಣ ಮಂಡಳಿಯೂ ಅಸ್ತಿತ್ವಕ್ಕೆ ಬಂದಿತು. ೨೦೦೪-೦೫ರ ಮಾಹಿತಿಯಂತೆ ಮೈಸೂರು ನಗರ ಹಾಗೂ ತಾಲೂಕಿನಲ್ಲಿ ೭೦ ಪದವಿಪೂರ್ವ ಕಾಲೇಜುಗಳಿದ್ದು, ೯೫೯೨ ಹುಡುಗರು, ೧೧,೧೫೩ ಹುಡುಗಿಯರು ಇದ್ದರು. ಜೊತೆಗೆ ವೃತ್ತಿ ಶಿಕ್ಷಣ ಕಾಲೇಜುಗಳೂ ಪಾಲಿಟೆಕ್ನಿಕ್‌ಗಳು, ಡಿಪ್ಲೊಮ ಕಾಲೇಜುಗಳು ಇವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೮೨ ಪದವಿಪೂರ್ವ ಕಾಲೇಜುಗಳಲ್ಲಿ ೧೬,೪೪೯ ಬಾಲಕರು ಹಾಗೂ ೧೫,೨೬೩ ಬಾಲಕಿಯರು ವ್ಯಾಸಂಗ ನಿರತರಾಗಿದ್ದರು. ಅಲ್ಲದೆ ತಾಲೂಕಿನ ಒಂಭತ್ತು ವೃತ್ತಿ ಶಿಕ್ಷಣ ಕೇಂದ್ರ, ಪಾಲಿಟೆಕ್ನಿಕ್‌ಗಳಲ್ಲಿ ೩೯೫೩ ಬಾಲಕರು, ೨೧೦೫ ಬಾಲಕಿಯರೂ ವ್ಯಾಸಂಗ ಮಾಡುತ್ತಿದ್ದರು.

**ಇತರೆ ಶಿಕ್ಷಣಗಳು :** ನಾಲ್ಕು ಕಾನೂನು ಕಾಲೇಜು, ಶಿಕ್ಷಕರ ತರಬೇತಿ ಕೇಂದ್ರಗಳು, ಶಿಕ್ಷಕರ ಪ್ರಶಿಕ್ಷಣ ಮಹಾವಿದ್ಯಾಲಯಗಳು, ದೈಹಿಕ ಶಿಕ್ಷಣ ಕಾಲೇಜುಗಳು, ಸಂಸ್ಕೃತ ಪಾಠಶಾಲೆಗಳು, ವೃತ್ತಿ ಶಿಕ್ಷಣ ಸಂಸ್ಥೆಗಳು, ಡಿಪ್ಲಮೋ ಕಾಲೇಜುಗಳು, ನರ್ಸಿಂಗ್ ಕಾಲೇಜುಗಳು, ಚಿತ್ರಕಲಾ ಶಾಲೆಗಳು, ನೃತ್ಯಶಾಲೆಗಳೇ ಮುಂತಾದವು ನಗರದಲ್ಲಿವೆ.

**ಪದವಿ ಶಿಕ್ಷಣ :** ೧೯೯೫ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ೨೫ ಪದವಿ ಕಾಲೇಜುಗಳಲ್ಲಿ ೧೦,೫೧೮ ವ್ಯಾಸಂಗಾರ್ಥಿಗಳು ದಾಖಲಾಗಿದ್ದರು. ೨೦೦೭ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ ೬,೦೬೩ ಬಾಲಕರು ಹಾಗೂ ೮೦೦೪ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ತಾಲೂಕಿನಲ್ಲಿ ಸರ್ಕಾರಿ ಕಾಲೇಜುಗಳ ಜೊತೆಗೆ ವಾಣಿವಿಲಾಸ ಕಾಲೇಜು, ಶಾರದಾ ವಿಲಾಸ್ ಕಾಲೇಜು, ಡಿ. ಬನುಮಯ್ಯ ಕಾಲೇಜು, ಮರಿಮಲ್ಲಪ್ಪ ಕಾಲೇಜು, ಜೆ.ಎಸ್.ಎಸ್. ವಿದ್ಯಾಸಂಸ್ಥೆ, ಸೆಂಟ್ ಫಿಲೋಮಿನಾ ಕಾಲೇಜು, ಮಹಾಜನ ಶಿಕ್ಷಣ ಸಂಸ್ಥೆ ಮುಂತಾದ ಅನುದಾನಿತ ಖಾಸಗಿ ಕಾಲೇಜುಗಳು ಶಿಕ್ಷಣ ಪ್ರಸಾರದಲ್ಲಿ ತೊಡಗಿವೆ.

**ಮೈಸೂರು ವಿಶ್ವವಿದ್ಯಾನಿಲಯ :** ಭಾರತದಲ್ಲಿ ಉನ್ನತ ಶಿಕ್ಷಣದ ಪ್ರಾಮುಖ್ಯವನ್ನು ಕುರಿತು ಅಗತ್ಯ ಸೌಲಭ್ಯವನ್ನು ಒದಗಿಸಿಕೊಟ್ಟ ಆಶ್ರಿತ ಸಂಸ್ಥಾನಗಳಲ್ಲಿ ಮೈಸೂರು ಮೊದಲನೆಯದು. ೧೮೫೩ರಲ್ಲಿ ಆರಂಭವಾದ ಮೈಸೂರಿನ ಮಹಾರಾಜ ಕಾಲೇಜು, ಮತ್ತು ಈ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಸರ್ವವಿಧದಲ್ಲಿಯೂ ಸಹಾಯ ನೀಡಿದವರು ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಇದರ ಆರಂಭಕ್ಕೆ ಸತತವಾಗಿ ದುಡಿದ ಅಂದಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರು. ೧೯೧೬ರಲ್ಲಿ ಸಂಸ್ಥಾನದಲ್ಲೇ ಮೊಟ್ಟ ಮೊದಲನೆಯದಾಗಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮೈಸೂರಿನ ಮಹಾರಾಜ ಕಾಲೇಜು ಹಾಗೂ ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳು ಕೇಂದ್ರ ಸಂಸ್ಥೆಗಳಾದವು. ಮೈಸೂರು ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿ ಎಚ್.ವಿ. ನಂಜುಂಡಯ್ಯನವರು ೧೯೧೬ ರಿಂದ ೧೯ ರವರೆಗೆ ಸೇವೆ ಸಲ್ಲಿಸಿದರು.

೧೯೧೭ರಲ್ಲಿ ಸ್ಥಾಪನೆಗೊಂಡ ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜು, ೧೯೨೪ರಲ್ಲಿ ಆರಂಭಗೊಂಡ ಸಂಸ್ಥಾನದ ಮೂರು ಮೆಡಿಕಲ್ ಕಾಲೇಜುಗಳೂ ಇದರ ವ್ಯಾಪ್ತಿಗೊಳಪಟ್ಟವು. ೧೯೫೯ರ ವೇಳೆಗೆ ವಿಶ್ವವಿದ್ಯಾನಿಲಯದ ಇನ್ನೂ ೧೩ ನೂತನ ಕಾಲೇಜುಗಳು ಆರಂಭವಾದವು, ಈ ವಿಶ್ವವಿದ್ಯಾನಿಲಯದ ಮೂಲ ಶಾಸನ ೧೯೩೩ರಲ್ಲೂ ಆನಂತರ ೧೯೭೯ರಲ್ಲಿ ತಿದ್ದುಪಡಿಯಾಗಿ ಸೆನೆಟ್ಟಿನ ಸದಸ್ಯತ್ವ ಹೆಚ್ಚು ವ್ಯಾಪ್ತಿಯುತವಾದುದರ ಜೊತೆಗೆ ಅಕೆಡಮಿಕ್ ಕೌನ್ಸಿಲ್‌ನ್ನು ಆರಂಭಿಸಿ ತನ್ನ ಶೈಕ್ಷಣಿಕ ಕಾರ್ಯಕ್ರಮಗಳನ್ನು ತಾನೇ ರೂಪಿಸಿ ನಡೆಸಿಕೊಂಡು ಬರುವ ಹಕ್ಕು ಪಡೆದುಕೊಂಡಿತು. ಆನಂತರ ೧೯೫೬ರ ಕಾಯಿದೆಯ ಪ್ರಕಾರ ವಿಶ್ವವಿದ್ಯಾನಿಲಯ ಸ್ವತಂತ್ರ ಸಂಸ್ಥೆಯಾಯಿತು. ೧೯೬೦ರಲ್ಲಿ ಆಗತಾನೆ ಖರೀದಿಸಲ್ಪಟ್ಟ ಜಯಲಕ್ಷ್ಮಿಮ್ಯಾನ್ಷನ್‌ಗೆ ಮಹಾರಾಜ ಕಾಲೇಜಿನಲ್ಲಿ ನಡೆಯುತ್ತಿದ್ದ ಸ್ನಾತಕೋತ್ತರ ತರಗತಿಗಳು ವರ್ಗವಾದವು. ವಿಶ್ವವಿದ್ಯಾನಿಲಯದ ನೂತನ ಬಡಾವಣೆಗೆ ಅಂದಿನ ಉಪಕುಲಪತಿಗಳಾಗಿದ್ದ ಪ್ರಸಿದ್ಧ ಕನ್ನಡ ಕವಿ ಕೆ.ವಿ. ಪುಟ್ಟಪ್ಪನವರು ಮಾನಸಗಂಗೋತ್ರಿ ಎಂದು ನಾಮಕರಣ ಮಾಡಿದರು.

ಮೈಸೂರು ವಿಶ್ವವಿದ್ಯಾನಿಲಯ ಡಿ.ಲಿಟ್., ಡಿ.ಎಸ್‌ಸಿ., ಡಿ.ಇಡಿ., ಡಿ.ಇ., ಪಿಎಚ್.ಡಿ. – ಈ ಡಾಕ್ಟರೇಟ್ ಪದವಿಗಳನ್ನು ಎಂ.ಎ., ಎಂ.ಎಸ್.ಸಿ., ಎಂ.ಇ.ಡಿ., ಎಂ.ಕಾಂ., ಎಂ.ಮ್ಯೂಸಿಕ್. ಎಂ.ಎಸ್.ಡಬ್ಲ್ಯೂ. ಎಂ.ಬಿ.ಎ., ಎಂ.ಸಿ.ಎ. ಎಲ್.ಎಲ್.ಎಂ. ಎಂ.ಫಿಲ್ ಮುಂತಾದ ಸ್ನಾತಕೋತ್ತರ ಪದವಿಗಳನ್ನೂ ಬಿ.ಎ. ಬಿ.ಎಸ್‌ಸಿ., ಬಿ.ಮ್ಯೂಸಿಕ್, ಬಿ.ಬಿ.ಎಂ. ಬಿ.ಕಾಂ., ಮುಂತಾದ ಸ್ನಾತಕಪೂರ್ವ ಪದವಿಗಳನ್ನು, ವಿದೇಶಿಭಾಷೆ, ಮುದ್ರಣ, ಭಾಷಾಂತರ, ಡಿಪ್ಲಮೋಗಳನ್ನು, ನೀಡುತ್ತಿದೆ. ೧೯೬೮ರಿಂದ ಅಂಚೆ ಮತ್ತು ತೆರಪಿನ ಶಿಕ್ಷಣ ಸೌಲಭ್ಯವನ್ನು ನೀಡುತ್ತಿದ್ದು, ಇದೇ ಮುಂದೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವಾಗಿ ಮಾರ್ಪಾಡಾಯಿತು (೧೯೯೮). ವಿದ್ಯಾಭ್ಯಾಸಕ್ಕಾಗಿ ಸಂಶೋಧನೆಗೆ ಬೇಕಾಗುವ ಎಲ್ಲಾ ಬಗೆಯ ಆಧುನಿಕ ಸೌಲಭ್ಯವನ್ನು ವಿಶ್ವವಿದ್ಯಾನಿಲಯ ಒಳಗೊಂಡಿದ್ದು, ದೇಶ ವಿದೇಶಗಳಿಂದ ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ವಿಶ್ವ ವಿದ್ಯಾನಿಲಯ ಧನಸಹಾಯ ಆಯೋಗದಿಂದ (ನ್ಯಾಕ್) 'ಪಂಚತಾರ' ಶ್ರೇಣಿಯನ್ನು ಗಳಿಸಿಕೊಂಡಿದೆ.

**ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ :** ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳು ಅಧ್ಯಯನ ನಿರತರಾಗಿದ್ದಾರೆ. ೨೦೦೪–೦೫ ಶೈಕ್ಷಣಿಕ ವರ್ಷದಲ್ಲಿ ನೋಂದಾಯಿತರಾದ ಒಟ್ಟು ವಿದ್ಯಾರ್ಥಿಗಳ ವಿವರ ಇಂತಿದೆ; ಬಿ.ಎ./ಬಿ.ಕಾಂ.–೧೨,೮೧೪, ಬಿಲಿಬ್‌ಸೈನ್ಸ್–೫೯೨, ಎಂ.ಎ., ಎಂ.ಕಾಂ. ೧೩,೨೬೨, ಎಂ.ಬಿ.ಎ. ೧,೩೨೬, ಪಿಎಚ್.ಡಿ. ೪೪, ಡಿಪ್ಲಮೋ/ ಸರ್ಟಿಫಿಕೇಟ್ ಕೋರ್ಸ್ ೧,೮೬೩, ಬಿ.ಎಡ್.೫೦೦, ಎಂ.ಎಡ್.೪೭೫, ಬಿ.ಎಸ್ಸಿ. (ಐ.ಟಿ.) ೨,೪೨೭, ಎಂ.ಎಸ್ಸಿ. (ಐ.ಟಿ) ೧,೩೪೪, ಹೀಗೆ ಒಟ್ಟು ೩೪,೬೪೭ ಮಂದಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

**ಮಹಾರಾಜ ಕಾಲೇಜು :** ಈ ಸಂಸ್ಥೆ ೧೮೩೩ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಮೈಸೂರಿನ ಚರ್ಚ್ ರಸ್ತೆಯ ಕಟ್ಟಡವೊಂದರಲ್ಲಿ ಆರಂಭವಾಯಿತು. ೧೮೬೮ರಲ್ಲಿ ಮಹಾರಾಜರು ನಿಧನಗೊಂಡ ಬಳಿಕ ಸರ್ಕಾರಕ್ಕೆ ಸೇರಿಸಲ್ಪಟ್ಟು ಮಹಾರಾಜರ ಪಾಠಶಾಲೆಯೆಂದು ಕರೆಯಲ್ಪಟ್ಟಿತು. ಇದು ಬಹಳ ವರ್ಷಗಳ ಕಾಲ ವಿಶ್ವವಿದ್ಯಾನಿಲಯಕ್ಕೆ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳ ತರಬೇತಿ ಕೇಂದ್ರವಾಗಿದ್ದಿತು. ೧೮೭೯ರಲ್ಲಿ ಎರಡನೆಯ ದರ್ಜೆ ಕಾಲೇಜಾಗಿ ಮದ್ರಾಸ್ ವಿಶ್ವವಿದ್ಯಾನಿಲಯದ ಸದಸ್ಯತ್ವ ಪಡೆಯಿತು. ೧೮೯೪ರಲ್ಲಿ ಪ್ರಥಮ ದರ್ಜೆಗೆ ಏರಿಸಲ್ಪಟ್ಟಿತು. ೧೯೧೬ರಲ್ಲಿ ಮೈಸೂರು ಸಂಸ್ಥಾನದ ವಿಶ್ವವಿದ್ಯಾನಿಲಯ ಸ್ಥಾಪನೆಯಾದ ನಂತರ ಅದರ ವ್ಯಾಪ್ತಿಗೊಳಪಟ್ಟಿತು. ಇಂದೂ ಇಲ್ಲಿ ಬಿ.ಎ., ಬಿ.ಕಾಂ., ಬಿ.ಬಿ.ಎಂ., ಬಿ.ಎಸ್ಸಿ, ಹಾಗೂ ಕೆಲವು ಸ್ನಾತಕೋತ್ತರ ಪದವಿಗಳ ತರಗತಿಗಳು ನಡೆಯುತ್ತಿವೆ. ಪದವಿ ಕಾಲೇಜು ಕೂಡ ಕಾರ್ಯ ನಿರ್ವಹಿಸುತ್ತಿದೆ.

**ಮಹಾರಾಣಿ ಕಾಲೇಜು :** ದಕ್ಷಿಣ ಭಾರತದಲ್ಲೇ ಸ್ತ್ರೀಶಿಕ್ಷಣಕ್ಕಾಗಿ ಪ್ರಥಮವಾಗಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆ ೧೮೮೧ರಲ್ಲಿ ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಕಟ್ಟಡವೊಂದರಲ್ಲಿ ಪ್ರಾಥಮಿಕ ಹಾಗೂ ಪ್ರೌಢ ತರಗತಿಗಳೊಂದಿಗೆ ಪ್ರಾರಂಭವಾಯಿತು. ಪ್ರಾರಂಭದಲ್ಲಿ ಮಹಿಳಾ ಸೂಪರಿಂಟೆಂಡೆಂಟ್ ಇದರ ಕಾರ್ಯ ನಿರ್ವಹಿಸುತ್ತಿದ್ದರು. ಮೊದಲಿಗೆ ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಒಂದು ಅಂಗವಾಗಿದ್ದು, ೧೯೧೯ರಲ್ಲಿ ಈ ಕಾಲೇಜಿನಿಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳನ್ನು ಬೇರ್ಪಡಿಸಿದ ನಂತರ ಸಂಪೂರ್ಣವಾಗಿ ವಿಶ್ವವಿದ್ಯಾನಿಲಯದ ಅಧಿಕಾರಕ್ಕೆ ಇದು ಒಳಪಟ್ಟಿತು. ಸುಮಾರು ೧೦ ವಿದ್ಯಾರ್ಥಿನಿಯರಿಂದ ಪ್ರಾರಂಭವಾದ ಈ ಕಾಲೇಜು ಇಂದು ಸಹಸ್ರ ಸಂಖ್ಯೆ ಮೀರಿದೆ. ವಿಜ್ಞಾನ ಕಾಲೇಜು ಪ್ರತ್ಯೇಕಗೊಂಡಿದೆ. ಪ್ರತ್ಯೇಕ ವಿದ್ಯಾರ್ಥಿನಿ ನಿಲಯವೂ ಇದೆ.

**ಮಹಾರಾಣಿ ಕಲಾ ಕಾಲೇಜು :** ಪ್ರಾರಂಭದಲ್ಲಿ ಮಹಾರಾಣಿ ಕಲಾ ಕಾಲೇಜು ವಿಜ್ಞಾನ ಕಾಲೇಜಿನ ಜೊತೆಯಲ್ಲೇ ನಡೆಯುತ್ತಿದ್ದು, ೧೯೭೯ರಲ್ಲಿ ಪ್ರತ್ಯೇಕಗೊಂಡಿತು. ಇಂದು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿನಿಯರಿದ್ದಾರೆ. ಪ್ರತ್ಯೇಕ ವಿದ್ಯಾರ್ಥಿ ನಿಲಯವನ್ನೂ ಹೊಂದಿದೆ.

**ತಾಂತ್ರಿಕ ಶಿಕ್ಷಣ :** ಜಿಲ್ಲಾಕೇಂದ್ರ ಮೈಸೂರು ನಗರ, ತಾಂತ್ರಿಕ ಶಿಕ್ಷಣಕ್ಕೆ ೨೦ನೇ ಶತಮಾನದ ಆರಂಭದಲ್ಲೇ ಆಳರಸರ ಆಳ್ವಿಕೆಯಲ್ಲಿ ತೆರೆದುಕೊಂಡುದು ಉಲ್ಲೇಖಾರ್ಹ. ತಾಲೂಕಿನಲ್ಲಿದ್ದ ನಾಲ್ಕು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ೪,೪೫೩ ವಿದ್ಯಾರ್ಥಿಗಳು ೧೯೯೫ರಲ್ಲಿ ವ್ಯಾಸಂಗ ಮಾಡುತ್ತಿದ್ದರೆ, ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ಆರು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ೫,೭೭೬ ವಿದ್ಯಾರ್ಥಿಗಳು ಹಾಗೂ ೪,೦೪೧ ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದರು. ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು (ಹಗಲು ಮತ್ತು ಸಂಜೆ ಕಾಲೇಜು) ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರ್ಸ್ (ಹಗಲು ಮತ್ತು ಸಂಜೆ ಕಾಲೇಜು), ಜೆ.ಎಸ್.ಎಸ್. ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಫಾರ್ ವುಮನ್, ವಿದ್ಯಾವಿಕಾಸ್

ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ವಿದ್ಯಾವರ್ಧನ ಎಂಜಿನಿಯರಿಂಗ್ ಕಾಲೇಜು, NIE ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿ ಎಂಬ ಆರು ಕಾಲೇಜುಗಳಾಗಿದ್ದು, ಕೊನೆಯ ನಾಲ್ಕು ಕಾಲೇಜುಗಳು ಅನುದಾನರಹಿತ ಸ್ವರೂಪದ್ದಾಗಿವೆ.

**ವೈದ್ಯಕೀಯ ಶಿಕ್ಷಣ :** ಮೈಸೂರು ಮೆಡಿಕಲ್ ಕಾಲೇಜು ಸರ್ಕಾರದ ವತಿಯಿಂದ ೧೯೨೪ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾಯಿತಾದರೂ ೧೯೩೦ರಲ್ಲಿ ಮೈಸೂರಿಗೆ ವರ್ಗಾಯಿಸಲ್ಪಟ್ಟಿತು. ೧೯೬೨–೬೩ ರಿಂದ ಎಂ.ಡಿ., ಎಂ.ಎಸ್. ಪದವಿಗಳ ಶಿಕ್ಷಣವನ್ನೂ ನೀಡಲಾಗುತ್ತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಯೋಗಗಳಿಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆ ಸರ್ಜಿಕಲ್ ವಾರ್ಡ್, ಕಲ್ಲುಕಟ್ಟಡ, ಚಲುವಾಂಬಾ ಆಸ್ಪತ್ರೆ, ಮಕ್ಕಳ ಆಸ್ಪತ್ರೆ, ಕಣ್ಣಾಸ್ಪತ್ರೆಗಳಿವೆ. ಇದರ ಪಕ್ಕದಲ್ಲೇ ಆಯುರ್ವೇದ ಕಾಲೇಜು ಹಾಗೂ ಆಸ್ಪತ್ರೆಗಳಿವೆ. ೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿದ್ದ ನಾಲ್ಕು (೨ ಅಲೋಪತಿ + ೨ ಆಯುರ್ವೇದ) ವೈದ್ಯಕೀಯ ಕಾಲೇಜುಗಳಲ್ಲಿ ೧೧೯೬ ಬಾಲಕರು ಹಾಗೂ ೧೦೮೧ ಬಾಲಕಿಯರು ವ್ಯಾಸಂಗ ಮಾಡುತ್ತಿದ್ದರು. ತಾಲೂಕಿನಲ್ಲಿದ್ದ ಎರಡು ದಂತ ವೈದ್ಯಕೀಯ ಕಾಲೇಜುಗಳಲ್ಲಿ ೨೬೭ ಬಾಲಕರು, ೩೮೧ ಬಾಲಕಿಯರು ಅಭ್ಯಾಸ ನಿರತರಾಗಿದ್ದರು. ಅವು ಕ್ರಮವಾಗಿ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಹಾಗೂ ಜೆ.ಎಸ್.ಎಸ್. ದಂತ ವೈದ್ಯಕೀಯ ಕಾಲೇಜುಗಳಾಗಿವೆ.

**ವಿದ್ಯಾರ್ಥಿ ನಿಲಯಗಳು :** ಗ್ರಾಮೀಣ ಹಾಗೂ ಬಡ ವಿದ್ಯಾರ್ಥಿಗಳ ಶಿಕ್ಷಣಾನುಕೂಲಕ್ಕಾಗಿ ಸರ್ಕಾರ ಹಲವಾರು ಅಭಿವೃದ್ಧಿ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಂಡಿದ್ದು, ಅವರ ಮೂಲಭೂತ ಅಗತ್ಯವಾದ ಊಟ ಮತ್ತು ವಸತಿಗಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದೆ. ಮೈಸೂರು ತಾಲೂಕಿನಲ್ಲಿ ಸ್ವಾತಂತ್ರ್ಯಪೂರ್ವದಿಂದಲೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿರುವುದು ಗಮನಾರ್ಹ. ಇದಕ್ಕಾಗಿ ರಾಜ್ಯಮಟ್ಟದಲ್ಲಿ ಸಮಾಜಕಲ್ಯಾಣ ಇಲಾಖೆಯು ಈ ಜವಾಬ್ದಾರಿಯನ್ನು ಹೊತ್ತಿದೆ. ತಾಲೂಕು ಮಟ್ಟದಲ್ಲಿ ಮೈಸೂರಿನಲ್ಲಿರುವ ಸಮಾಜ ಕಲ್ಯಾಣಾಧಿಕಾರಿಯ ಕಛೇರಿಯು ತಾಲೂಕಿನಲ್ಲಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಎರಡು ಹಂತಗಳಲ್ಲಿ ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಣೆ ನಡೆಸುತ್ತಿದೆ. ಜೊತೆಗೆ ಮೈಸೂರು ನಗರದಲ್ಲಿರುವ ಉಚ್ಚ ವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಹಾಗೂ ಖಾಸಗೀ ಒಡೆತನದಲ್ಲಿರುವ ಹತ್ತಾರು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ.

೨೦೦೯ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ಏಳು ಮೆಟ್ರಿಕ್ ಪೂರ್ವದ (ಸರ್ಕಾರಿ) ಪರಿಶಿಷ್ಟ ಜಾತಿ ವಿದ್ಯಾರ್ಥಿ ನಿಲಯಗಳಿದ್ದು, ಅವುಗಳಲ್ಲಿ ೬೫೦, ಮೆಟ್ರಿಕ್ ಪೂರ್ವದ ಐದು ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ ೩೫೦, ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಎಂಟು ವಿದ್ಯಾರ್ಥಿನಿಲಯದಲ್ಲಿ ೭೫೦, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗಾಗಿ ಮೆಟ್ರಿಕ್ ಪೂರ್ವದ ಒಂದು ವಿದ್ಯಾರ್ಥಿನಿಲಯದಲ್ಲಿ ೫೦, ಮೆಟ್ರಿಕ್ ನಂತರದ ೨೦ ವಿದ್ಯಾರ್ಥಿ ನಿಲಯಗಳಲ್ಲಿ ೧೨೫ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದರು.

ಅದೇ ಹಿಂದುಳಿದ ವರ್ಗದವರಿಗಾಗಿ ತಾಲೂಕಿನಲ್ಲಿದ್ದ ಆರು ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ ೩೧೫ ವ್ಯಾಸಂಗಾರ್ಥಿಗಳು, ಎರಡು ಅನುದಾನಿತ ವಿದ್ಯಾನಿಲಯಗಳಲ್ಲಿ ೨೦೦; ಮತ್ತು ಮೆಟ್ರಿಕ್ ನಂತರದ ೧೨ ವಿದ್ಯಾರ್ಥಿನಿಲಯಗಳಲ್ಲಿ ೧೩೨೫ ಫಲಾನುಭವಿಗಳಿದ್ದರು. ಅಲ್ಲದೆ ಮೂರು ಶ್ರೀ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ೫೦೦ ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದು, ವ್ಯಾಸಂಗ ಮುಂದುವರಿಸಿದ್ದರು.

**ಉಚಿತ ವಿದ್ಯಾರ್ಥಿನಿಲಯಗಳು :** ತಾಲೂಕಿನ ಮುಖ್ಯ ನಗರ ಮೈಸೂರಿನಲ್ಲಿ ಜೆ.ಎಸ್.ಎಸ್. ಉಚಿತ ಪ್ರಸಾದ ನಿಲಯ, ಕಬ್ಬಳ್ಳಿ ಸಾಹುಕಾರ್ ಸುಬ್ಬಣ ವಿದ್ಯಾರ್ಥಿನಿಲಯ, ಮದ್ದಾನೇಶ್ವರ ವಿದ್ಯಾರ್ಥಿನಿಲಯ, ಸುಮ್ಮನೇರಳೆ ಸಾಹುಕಾರ್ ಟಿ.ಎಸ್. ಸಿದ್ಧಪ್ಪ ಹಾಸ್ಟಲ್, ವೀರಶೈವ ಅನಾಥಾಲಯ, ಚಿಕ್ಕಬಸಮ್ಮಯ್ಯನವರ ಉಚಿತ ವಿದ್ಯಾರ್ಥಿನಿಲಯ, ಆಲಮ್ಮನವರ ಛತ್ರ, ಕೆ.ಎಚ್. ರಾಮಯ್ಯ ಹಾಸ್ಟಲ್, ಬೆಟ್ಟದಪುರದ ಹಾಸ್ಟಲ್, ಆರ್ಯ ವೈಶ್ಯರ ಹಾಸ್ಟಲ್, ಶಾರದಾ ನಿಕೇತನ, ಜೈನರ ಹಾಸ್ಟಲ್, ಹಯಗ್ರೀವ ಹಾಸ್ಟಲ್, ಅಂಬಳೆ ಅಣ್ಣಯ್ಯ ಪಂಡಿತರ ಮುನ್ಸಿಫಲ್ ಕಾರ್ಪೊರೇಷನ್ ಹಾಸ್ಟಲ್, ಬಿ. ಪುಟ್ಟೀರಮ್ಮ ಕಿವುಡ ತಾತಯ್ಯನವರ ಅನಾಥಾಲಯ ಮತ್ತು ಮೂಗರ ವಸತಿಶಾಲೆ ಮುಂತಾದವು ಕಾರ್ಯ ನಿರ್ವಹಿಸುತ್ತಿವೆ.

**ವಯಸ್ಕರ ಶಿಕ್ಷಣ :** ಮೈಸೂರು ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ವಯಸ್ಕರ ನಿರಕ್ಷರತಾ ನಿವಾರಣಾ ಯೋಜನೆಯನ್ನು ಪ್ರಾರಂಭಿಸಿದ ಕೀರ್ತಿ ಸರ್.ಎಂ.ವಿಶ್ವೇಶ್ವರಯ್ಯನವರಿಗೆ ಸಲ್ಲುವುದು. ಆ ಯೋಜನೆಯ ಪ್ರಕಾರ ೧೯೧೨ರಲ್ಲಿ ಸಂಸ್ಥಾನದಾದ್ಯಂತ ವಯಸ್ಕರಿಗಾಗಿ ೭,೦೦೦ ಅಕ್ಷರ ಪ್ರಚಾರ ತರಗತಿಗಳು ಪ್ರಾರಂಭವಾದವು. ಗ್ರಾಮಾಂತರ ಪ್ರದೇಶಗಳಲ್ಲಿ ಸಂಚಾರಿ ಪುಸ್ತಕ ಭಂಡಾರಗಳು ಅಸ್ತಿತ್ವಕ್ಕೆ ಬಂದವು.

೧೯೪೦ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಸಂಘದ ಸಮಾಜ ಸೇವಾ ಉಪಸಮಿತಿ ಅಲ್ಪ ಪ್ರಮಾಣದ ಅಕ್ಷರ ಪ್ರಚಾರ ಕಾರ್ಯಕ್ರಮವನ್ನು ಕೈಗೊಂಡಿತು. ಈ ಕಾರ್ಯಕ್ಕೆ ಸಂಘ ೩೦೦ ರೂಪಾಯಿಗಳನ್ನು ಮಂಜೂರು ಮಾಡಿತಲ್ಲದೆ ಸಂಘದ ಕರೆಗೆ ಓಗೊಟ್ಟು ೬೦೦ ಮಂದಿ ವಿದ್ಯಾರ್ಥಿಗಳು ಅಕ್ಷರ ಪ್ರಚಾರ ಸೇವೆ ಕೈಗೊಳ್ಳಲು ಮುಂದಾದರು. ಮೈಸೂರು ಪುರಸಭೆಯೂ ಈ ಕಾರ್ಯದಲ್ಲಿ ಸಹಕರಿಸಿತು. ಕಾರ್ಯಕ್ರಮ ವಿಸ್ತಾರವಾದಂತೆ ೧೯೪೧ರ ಪ್ರಾರಂಭದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಉಪಕುಲಪತಿಗಳ ಅಧ್ಯಕ್ಷತೆಯಲ್ಲಿ ಮೈಸೂರು ಅಕ್ಷರ ಪ್ರಚಾರ ಸಮಿತಿ ಜನ್ಮ ತಾಳಿತು. ಈ ಸಮಿತಿಯು ಇಡೀ ಮೈಸೂರು ಸಂಸ್ಥಾನಕ್ಕೆ ಅನ್ವಯವಾಗುವಂತೆ ಅಕ್ಷರ ಪ್ರಚಾರ ಯೋಜನೆಯನ್ನು ತಯಾರಿಸಿ ಸರ್ಕಾರದ ಒಪ್ಪಿಗೆಗೆ ಕಳುಹಿಸಿ ಅನುಮೋದನೆ ಪಡೆಯಿತು. ತತ್ಪರಿಣಾಮವಾಗಿ ಬಿ.ಎಂ.ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿ ಅಸ್ತಿತ್ವಕ್ಕೆ ಬಂದಿತು. ಸರ್ಕಾರ ಸಮಿತಿಯ ಯೋಜನೆಯನ್ನು ಪರಿಶೀಲಿಸಿ ಮೊದಲನೆಯ ಬಾರಿ ೫,೦೦೦ ರೂಪಾಯಿಗಳನ್ನು ಮಂಜೂರು ಮಾಡಿತು.

ಸಮಿತಿಯ ಕಾರ್ಯಕ್ರಮಗಳು ವಿಸ್ತಾರವಾದಂತೆ ಸರ್ಕಾರ ತನ್ನ ಅನುದಾನವನ್ನು ಹೆಚ್ಚಿಸಿ ಪ್ರೋತ್ಸಾಹಿಸುತ್ತಾ ಬಂದಿದೆ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ನೀತಿ ೧೯೭೮ರಲ್ಲಿ ಜಾರಿಯಾಗಿ ಸಾಕ್ಷರತಾ ಉದ್ದೇಶ ಹೊಂದಿದ ಹತ್ತು ತಿಂಗಳ ಅವಧಿಯ ಶಿಕ್ಷಣಯೋಜನೆ ಜಾರಿಗೆ ಬಂದಿತು. ಕರ್ನಾಟಕ ಸರ್ಕಾರ ೧೯೮೪ರಲ್ಲಿ ಸಾಕ್ಷರತಾ ಪ್ರಮಾಣ ಹೆಚ್ಚಿಸಲು 'ಅಕ್ಷರಸೇನೆ' ಯೋಜನೆಯನ್ನು ಜಾರಿಮಾಡಿತು. ಇದರಡಿ ಮೂರರಿಂದ ಆರು ವಯಸ್ಸಿನ ಮಕ್ಕಳಿಗೆ ಪೂರ್ವ ಪ್ರಾಥಮಿಕ, ಆರರಿಂದ ಹದಿನಾಲ್ಕು ವಯಸ್ಸಿನ ವರೆಗೆ ಪ್ರಾಥಮಿಕ ಹಾಗೂ ೧೫ ರಿಂದ ೩೫ ವಯಸ್ಸಿನ ನಿರಕ್ಷರಿಗಳಿಗೆ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಆನಂತರದಲ್ಲಿ ಕಾಲಕಾಲಕ್ಕೆ ನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಯಸ್ಕರ ಶಿಕ್ಷಣಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

**ಸಾಕ್ಷರತೆ :** ೨೦೦೧ರ ಜನಗಣತಿಯಂತೆ ತಾಲೂಕಿನಲ್ಲಿ ಸಾಕ್ಷರತೆ ಪ್ರಮಾಣ ಇಂತಿದ್ದಿತು. ಗ್ರಾಮೀಣ ಪ್ರದೇಶದ ಪುರುಷರು ಶೇ.೫೭.೯೮, ಸ್ತ್ರೀಯರು ೪೦.೨೪, ಒಟ್ಟು ಸರಾಸರಿ ೪೯.೬೮. ನಗರ ಪ್ರದೇಶದ ಪುರುಷರು ಶೇ.೮೮.೫೫, ಸ್ತ್ರೀಯರು ೮೦.೦೮, ಒಟ್ಟು ಸರಾಸರಿ ೮೪.೬೮. ತಾಲೂಕಿನಲ್ಲಿ ಒಟ್ಟು ಸಾಕ್ಷರತ ಪುರುಷರು ಶೇ.೮೧.೫೮ ಇದ್ದರೆ, ಸಾಕ್ಷರತ ಸ್ತ್ರೀಯರು ಶೇ.೭೬.೭೧ ಇದ್ದರು.

**ಮುಂದುವರಿಕೆ ಶಿಕ್ಷಣ ಯೋಜನೆ :** ಶಿಕ್ಷಣದಿಂದ ವಂಚಿತರಾದವರಿಗೆ ಓದು,ಬರಹ ಹಾಗೂ ಗಣಿತಗಳನ್ನು ಕಲಿಸುವುದು; ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸೂಕ್ತ ವಾತಾವರಣ ಕಲ್ಪಿಸುವುದು; ಮುಕ್ತ ಕಲಿಕೆ ಮುಖಾಂತರ ಪರ್ಯಾಯ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸುವುದು, ಜನರಲ್ಲಿ ಓದುವ ಹವ್ಯಾಸ ಬೆಳೆಸುವುದು, ರಾಷ್ಟ್ರೀಯ ಮೌಲ್ಯಗಳ ಅರಿವು ಮೂಡಿಸುವುದು, ಸಮುದಾಯ ಮನೋಭಾವ ಬೆಳೆಸುವುದು, ಮಾನವ ಸಂಪನ್ಮೂಲ ಅಭಿವೃದ್ಧಿಗೆ ಉತ್ತೇಜನ ನೀಡುವುದು. ಗ್ರಾಮೀಣ ಜನತೆ ಸರ್ಕಾರಿ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸುವುದು ಹಾಗೂ ಆಜೀವ ಪರ್ಯಂತ ಕಲಿಕಾ ಮನೋಭಾವದಿಂದ ಜನರು ಒಂದು ಕಲಿಕಾ ಸಮಾಜವನ್ನು ನಿರ್ಮಿಸುವಂತೆ ಮಾಡುವ ಉದ್ದೇಶಗಳಿಂದ ಸರ್ಕಾರ ಮೇಲ್ಕಂಡ ಯೋಜನೆಯನ್ನು ೨೦೦೧ರಲ್ಲಿ ಜಾರಿಗೆ ತಂದಿದೆ.

ಈ ಯೋಜನೆಯಲ್ಲಿ ನವಸಾಕ್ಷರರು, ಅರೆಸಾಕ್ಷರರು, ಅನಕ್ಷರಸ್ಥರು, ಶಾಲೆ ಬಿಟ್ಟವರು, ಅನೌಪಚಾರಿಕ ವ್ಯವಸ್ಥೆಯಲ್ಲಿ ಕಲಿತವರು ಹಾಗೂ ಸಮುದಾಯದ ಸರ್ವರೂ ಭಾಗವಹಿಸಬಹುದಾಗಿದೆ. ಈ ಕಾರ್ಯಕ್ರಮದ ಯಶಸ್ಸಿಗೆ ಕನಿಷ್ಠ ೨೫೦೦ ಜನಸಂಖ್ಯೆಗೆ ಒಂದರಂತೆ ಒಬ್ಬ ಪ್ರೇರಕ/ ಪ್ರೇರಕಿಯ ಮೇಲ್ವಿಚಾರಣೆಯಲ್ಲಿ ಮುಂದುವರಿಕೆ ಶಿಕ್ಷಣ ಕೇಂದ್ರಗಳನ್ನು ತೆರೆಯಲಾಗಿದೆ. ಈ ಯೋಜನೆಯ ಅನುಷ್ಠಾನವನ್ನು ಗ್ರಾಮ ಸಾಕ್ಷರತಾ ಸಂಸ್ಥೆಗಳು ಮೇಲ್ವಿಚಾರಣೆ ನಡೆಸುತ್ತವೆ. ಪ್ರತೀ ಹತ್ತು ಕೇಂದ್ರಗಳ ಉಸ್ತುವಾರಿಗೆ ಒಂದು 'ನೋಡಲ್ ಕೇಂದ್ರ'ವನ್ನು ಸ್ಥಾಪಿಸಲಾಗಿದೆ. ಇದರ ಉಸ್ತುವಾರಿಯನ್ನು ಒಬ್ಬ

ನೋಡಲ್ ಪ್ರೇರಕಿ ಹಾಗೂ ಒಬ್ಬ ನೋಡಲ್ ಪ್ರೇರಕರಿಂದ ನಿರ್ವಹಿಸಲಾಗುತ್ತದೆ. ಅದರಂತೆ ತಾಲೂಕಿನಲ್ಲೂ ವಯಸ್ಕರ ಶಿಕ್ಷಣ ಕಾರ್ಯಕ್ರಮ ಯಶಸ್ವಿಯಾಗುತ್ತಿದೆ.

**ಕಿವುಡ ಮತ್ತು ಅಂಧರ ಸರ್ಕಾರಿ ಶಾಲೆ:** ಮೈಸೂರಿನಲ್ಲಿರುವ ಕಿವುಡ ಮತ್ತು ಅಂಧ ಮಕ್ಕಳ ಸರ್ಕಾರಿ ಶಾಲೆಯು ೧೯೦೧ರ ಅಕ್ಟೋಬರ್ ತಿಂಗಳ ವಿಜಯದಶಮಿಯಂದು ಆರಂಭವಾಯಿತು. ಇದನ್ನು ಎಂ. ಶ್ರೀನಿವಾಸರಾಯರು (ನಿವೃತ್ತ ಶಾಲಾ ನಿರೀಕ್ಷಕರು) ಹಳ್ಳದಕೇರಿಯಲ್ಲಿದ್ದ ಸ್ವಗೃಹದಲ್ಲಿ ನಾಲ್ಕು ಮಂದಿ ಮಕ್ಕಳಿಗಾಗಿ ಆರಂಭಿಸಿದರು. ಮುಂದೆ ೧೯೦೨ರಲ್ಲಿ ಸರ್ಕಾರಿ ಶಿಕ್ಷಕರನ್ನು ನೇಮಿಸಿತು. ೧೯೦೫ರಲ್ಲಿ ಉಚಿತ ಊಟ-ವಸತಿ ನಿಲಯವನ್ನು ಪ್ರಾರಂಭಿಸಿತು. ಆಳರಸರ ಆಶ್ರಯವಿದ್ದಕ್ಕೆ ಲಭಿಸಿತು. ೧೯೨೭-೨೮ರಲ್ಲಿ ಈ ಶಾಲೆಯನ್ನು ಸರ್ಕಾರ ವಹಿಸಿಕೊಂಡಿತು. ಅದೇ ವರ್ಷ ಗಾಂಧೀಜಿ ಶಾಲೆಗೆ ಭೇಟಿ ನೀಡಿದ್ದರು. ಮುಂದೆ ೧೯೩೫ರಲ್ಲಿ ಅಂದಿನ ಭವ್ಯ ಕಟ್ಟಡ ನಿರ್ಮಾಣಗೊಂಡಿತು. ಏತನ್ಮಧ್ಯೆ ೧೯೩೩-೩೪ ಮಹಾರಾಜರು ಹ್ಯಾಂಡ್‌ಬ್ರೈಲ್ ಪ್ರೆಸ್ಸನ್ನು ಸ್ಥಾಪಿಸಿದರು. ೧೯೮೪ರಲ್ಲಿ ಜರ್ಮನಿಯಿಂದ ಆಧುನಿಕ ಬ್ರೈಲ್ ಮುದ್ರಣ ಯಂತ್ರವನ್ನು ತರಿಸಲಾಯಿತು. ಇಂದು ಗಣಕೀಕೃತಗೊಂಡಿರುವ ಈ ಮುದ್ರಣಾಲಯ ರಾಜ್ಯದ ಏಕೈಕ ಬ್ರೈಲ್ ಪ್ರೆಸ್ ಆಗಿದೆ. ನಿರುದ್ಯೋಗಿ ಅಂಧ-ಕಿವುಡರಿಗೆಂದು ಶೆಲ್ಟರ್ಡ್ ವರ್ಕ್‌ಶಾಪನ್ನು ತೆರೆಯಲಾಯಿತು. ೧೯೯೯ರಲ್ಲಿ ಈ ಶಾಲೆಗೆ ಸೇರಿದಂತೆ ವಿವಿಧ ಕಸುಬುಗಳ ತರಬೇತಿ ಕೇಂದ್ರವನ್ನು ಆರಂಭಿಸಲಾಯಿತು. ೧೯೬೮ರಿಂದ ಅಂಧ-ಕಿವುಡ ಹೆಣ್ಣುಮಕ್ಕಳಿಗೂ ಪ್ರವೇಶ ನೀಡಲಾಯಿತು. ೧೯೭೧ರಲ್ಲಿ ಪ್ರೌಢಶಾಲೆ ಆರಂಭವಾಯಿತು. ೧೯೮೨ರಲ್ಲಿ ಅಂಧರಿಗೆ ಹಾಗೂ ಕಿವುಡರಿಗೆ ಪ್ರತ್ಯೇಕ ಶಾಲೆಗಳಾದವು. ಇಂದಿಗೂ ಇವು ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿವೆ.

**ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆ :** ಹಿಂದಿನ ಮೈಸೂರು ಸಂಸ್ಥಾನದಲ್ಲಿ ೧೯ನೆಯ ಶತಮಾನದ ಆದಿ ಭಾಗದಿಂದ ಸಾರ್ವಜನಿಕ ಶಿಕ್ಷಣ ಚಟುವಟಿಕೆಗಳು ಬೆಳೆದರೂ, ವಿದ್ಯಾಕೇಂದ್ರದೊಂದಿಗೆ ಗ್ರಂಥಾಲಯಗಳ ಅಭಿವೃದ್ಧಿ ವ್ಯವಸ್ಥಿತವಾಗಿ ಬೆಳೆಯಲಿಲ್ಲ. ಗ್ರಂಥಾಲಯಗಳ ಮಹತ್ವವನ್ನು ಅರಿತ ಸರ್.ಎಂ.ವಿಶ್ವೇಶ್ವರಯ್ಯನವರು, ೧೯೧೩ರಲ್ಲಿ ರಾಜ್ಯದಲ್ಲಿ ರಚನಾತ್ಮಕವಾಗಿ ಗ್ರಂಥಾಲಯ ಚಳವಳಿಯನ್ನು ಪ್ರಾರಂಭಿಸಿ, ಶಿಕ್ಷಣ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರದ ಗಮನಕ್ಕೆ ತಂದರು. ೧೯೧೪ ರ ಜುಲೈ ೨೦ ರಂದು ಮೈಸೂರು ಸಂಸ್ಥಾನದ ಯುವರಾಜರಾಗಿದ್ದ, ನರಸಿಂಹರಾಜ ಒಡೆಯರಿಂದ ಮೈಸೂರು ನಗರದ ಪ್ರಥಮ ಸಾರ್ವಜನಿಕ ಗ್ರಂಥಾಲಯದ ಪ್ರಾರಂಭೋತ್ಸವ ಜರುಗಿತು. ಜನಸಾಮಾನ್ಯರಿಗಾಗಿ ಉಚಿತ ವಾಚನಾಲಯ ಹಾಗೂ ಪುಸ್ತಕಗಳನ್ನು ಇಲ್ಲಿ ಒದಗಿಸಲಾಯಿತು.

ಮೈಸೂರಿನ ಮಹಾರಾಜ ಕಾಲೇಜು ಹಾಗೂ ೧೯೧೬ರಲ್ಲಿ ಸ್ಥಾಪನೆಯಾದ ಮೈಸೂರು ವಿಶ್ವವಿದ್ಯಾನಿಲಯಗಳಲ್ಲಿ ಪ್ರತ್ಯೇಕ ಗ್ರಂಥಾಲಯಗಳು ಬೆಳೆದು ಉನ್ನತ ಶಿಕ್ಷಣದ ಸಾಧನೆಯಲ್ಲಿ ಗ್ರಂಥಗಳ ಅವಶ್ಯಕತೆಯನ್ನು ಪೂರೈಸುವ ಸಂಸ್ಥೆಗಳಾಗಿ

ರೂಪುಗೊಂಡವು. ಗ್ರಂಥಾಲಯ ಚಳವಳಿಯ ಇತಿಹಾಸದಲ್ಲಿ ಮೈಸೂರಿನ ವಯಸ್ಕರ ಶಿಕ್ಷಣ ಸಮಿತಿಯ ಪಾತ್ರ ಹಿರಿದು. ೧೯೪೧ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಆಶ್ರಯದಲ್ಲಿ ವಿದ್ಯಾರ್ಥಿಗಳ ಸಂಘದಿಂದ ಸ್ಥಾಪಿತವಾದ ವಯಸ್ಕರ ಅಕ್ಷರ ಪ್ರಚಾರ ಸಮಿತಿಯಿಂದ ಬೆಳೆದು ಮಹತ್ವ ಪೂರ್ಣ ಕೆಲಸಗಳನ್ನು ಮಾಡುತ್ತಿರುವ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾವಂತರು ಮತ್ತು ಅಲ್ಪ ಸ್ವಲ್ಪ ಓದು-ಬರಹ ಬಲ್ಲವರು ತಮ್ಮ ಜ್ಞಾನಶಕ್ತಿಯನ್ನು ಮುಂದುವರೆಸಲು ಸಾಧ್ಯವಾಗುವಂತೆ ಗ್ರಂಥಾಲಯಗಳನ್ನು ಸ್ಥಾಪಿಸಿತು.

ಪ್ರಸಿದ್ಧ ಗ್ರಂಥಾಲಯತಜ್ಞರಾದ ಡಾ. ರಂಗನಾಥನ್ ಅವರ ಸಲಹೆಗಳ ಮೇರೆಗೆ ರಚಿತವಾದ ಸಮಿತಿ ರಾಜ್ಯಕ್ಕೊಂದು ಸಾರ್ವಜನಿಕ ಗ್ರಂಥಾಲಯ ಅಧಿನಿಯಮದ ರೂಪರೇಷೆಗಳನ್ನು ತಯಾರಿಸಿತು. ಇದಕ್ಕೆ ೧೯೬೫ರಲ್ಲಿ ಸರ್ಕಾರದ ಮನ್ನಣೆಯೂ ದೊರೆತು ೧೯೬೬ ಏಪ್ರಿಲ್ ೧ ರಂದು ರಾಜ್ಯದಲ್ಲಿ ಅನುಷ್ಠಾನಕ್ಕೆ ಬಂದಿತು. ನಗರ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ವ್ಯಾಪಕವಾದ ಗ್ರಂಥಾಲಯ ಸೇವೆಯನ್ನು ಉಚಿತವಾಗಿ ಸರ್ವರಿಗೂ ಒದಗಿಸುವುದೇ ಈ ಅಧಿನಿಯಮದ ಪರಮ ಗುರಿಯಾಗಿದ್ದು, ದಿನಪತ್ರಿಕೆ, ನಿಯತಕಾಲಿಕೆ, ರಾಜ್ಯ ಪತ್ರ, ಉದ್ಯೋಗ ಮಾಹಿತಿ ಪತ್ರಿಕೆ, ಸಾಮಾನ್ಯ ಜ್ಞಾನದ ಪುಸ್ತಕ ಹಾಗೂ ಇತರೆ ಶೈಕ್ಷಣಿಕ ಆಕರಗಳ ವ್ಯವಸ್ಥೆ ಒದಗಿಸಲಾಯಿತು.

ಆದರೆ ಅದಕ್ಕೂ ಮೊದಲು, ೧೯೧೫ರ ಅಕ್ಟೋಬರ್ ೧೫ರಂದು ಮೈಸೂರು ಸಂಸ್ಥಾನದ ಯುವರಾಜ ನರಸಿಂಹರಾಜ ಒಡೆಯರಿಂದ ಆರಂಭವಾದ ನಗರಕೇಂದ್ರ ಗ್ರಂಥಾಲಯದಿಂದ ಇಂದಿನವರೆಗೂ ಅಕ್ಷರದಾಸೋಹ ಮುಂದುವರಿಸಿದೆ. ಮೈಸೂರಿನ ಮೂಲ ಸ್ವರೂಪಕ್ಕೆ ಅಭಿವೃದ್ಧಿಯ ಸುವರ್ಣ ಚೌಕಟ್ಟು ನೀಡಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿಶ್ವೇಶ್ವರಯ್ಯ ಮತ್ತು ಮಿರ್ಜಾ ಇಸ್ಮಾಯಿಲ್ ಅವರ ಕನಸಿನ ಕೂಸು ಈ ಗ್ರಂಥಾಲಯ. ಎಂ.ಹಂಜಹುಸೇನ್, ಬಿಎಂಶ್ರೀ. ರಂಗಅಯ್ಯಂಗಾರ್, ಎಂ.ವೆಂಕಟಕೃಷ್ಣಯ್ಯ, ಇ.ಡಬ್ಲ್ಯು ಥಾಮಸ್, ಎನ್.ಎಸ್.ಸುಬ್ಬರಾವ್, ಪಿ.ಜಿ.ಲಕ್ಷ್ಮಣರಾವ್ ಮೊದಲಾದ ಗಣ್ಯರು ಸಲ್ಲಿಸಿದ ಗ್ರಂಥಾಲಯ ಪ್ರಸ್ತಾವನೆಗೆ ೧೯೧೪ರ ಜುಲೈ ೨೦ರಂದು ಅನುಮೋದನೆ ದೊರೆತಿತ್ತು. ೧೯೧೯ರಲ್ಲಿ ಲೇಡಿಸ್ ಮ್ಯಾನೇಜಿಂಗ್ ಕಮಿಟಿ ಅಸ್ತಿತ್ವಕ್ಕೆ ಬಂದು, ಎಸ್.ವಿ.ರಂಗಣ್ಣನವರು ಇದರ ಮೊದಲ ಕಾರ್ಯದರ್ಶಿಯಾಗಿದ್ದರು. ಆಗ ಗ್ರಂಥಾಲಯದಲ್ಲಿ ಎ.ಬಿ. ಮತ್ತು ಸಿ. ವರ್ಗದ ಸದಸ್ಯರಿದ್ದರು. 'ಎ' ವಿಭಾಗದವರಿಗೆ ತಿಂಗಳಿಗೆ ೨ ರೂ.ಶುಲ್ಕವಿದ್ದರೆ, 'ಬಿ' ವಿಭಾಗದವರಿಗೆ ಒಂದು ರೂ. ಶುಲ್ಕವಿತ್ತು. 'ಸಿ' ವರ್ಗದ ಸದಸ್ಯರಿಗೆ ತಿಂಗಳಿಗೆ ೫೦ ಪೈಸೆ ಶುಲ್ಕವಿತ್ತು. ಪ್ರಸ್ತುತ ವ್ಯವಸ್ಥೆಯಲ್ಲಿ ವ್ಯಕ್ತಿಯೊಬ್ಬರು ೪೦ ರೂ. ಸದಸ್ಯತ್ವ ಶುಲ್ಕ ಪಾವತಿಸಿದರೆ ಮೂರು ಪುಸ್ತಕಗಳನ್ನು ೧೫ ದಿನಗಳವರೆಗೆ ಎರವಲು ಪಡೆಯಬಹುದಾಗಿತ್ತು.

ಈ ಗ್ರಂಥಾಲಯವು ೧೯೯೦ರಲ್ಲಿ ತನ್ನ ಅಮೃತ ಮಹೋತ್ಸವ ಆಚರಿಸಿಕೊಂಡಾಗ ೯೫,೭೦೦ ಗ್ರಂಥಗಳಿದ್ದವು. ಈಗ ನಗರಾದ್ಯಂತ ೧೨ ಶಾಖೆಗಳು ಎಂಟು ಸೇವಾ

ಕೇಂದ್ರಗಳು ಸೇರಿ ೨೦ ಗ್ರಂಥಾಲಯಗಳಿವೆ. ಎಲ್ಲಾ ಕಡೆ ಸೇರಿ ಒಟ್ಟು ೬,೭೮,೭೦೧ ಗ್ರಂಥಗಳಿವೆ. ೨೦೦೬ರ ನವೆಂಬರ್ ಹೊತ್ತಿಗೆ ಇಲ್ಲಿನ ಸದಸ್ಯರ ಸಂಖ್ಯೆ ೩೯,೨೧೯. 'ಶ್ರೀ ಕುವೆಂಪು ಸಂಚಾರಿ ಗ್ರಂಥಾಲಯ' ವಿವಿಧ ಬಡಾವಣೆಗಳಲ್ಲಿ ಸೇವೆ ಸಲ್ಲಿಸುತ್ತಿದೆ. ೩೨೮ ದಿನ ಪತ್ರಿಕೆ (ಕನ್ನಡ–೧೮೪; ಇಂಗ್ಲಿಷ್ ೧೨೨, ಇತರೆ ೧೮), ೨೬೦ ವಾರಪತ್ರಿಕೆ (ಕನ್ನಡ ೪, ಇಂಗ್ಲೀಷ್–೪೪), ೨೮೩ ಮಾಸಿಕ (ಕನ್ನಡ ೧೭೪, ಇಂಗ್ಲೀಷ್ ೧೦೯) ಸೇರಿ ಈ ನಗರ ಕೇಂದ್ರ ಗ್ರಂಥಾಲಯದಲ್ಲಿ ಲಭ್ಯವಿರುವ ಪತ್ರಿಕೆಗಳ ಒಟ್ಟು ಸಂಖ್ಯೆ ೯೧೫.

೨೦೦೪–೦೫ ಹಾಗೂ ೨೦೦೫–೦೬ನೆಯ ಸಾಲಿನಲ್ಲಿ ೧.೪ ಕೋಟಿ ರೂಪಾಯಿ ಗ್ರಂಥಾಲಯ ಕರ ಸಂಗ್ರಹಿಸಿದೆ. ಈಗಿರುವ ಕಟ್ಟಡದಲ್ಲಿ ಓದುಗರಿಗೆ ಜಾಗ ಹಾಗೂ ಇತರ ಮೂಲಭೂತ ಸೌಕರ್ಯಗಳಿಲ್ಲ. ೧೯೯೦ರಲ್ಲಿ ಅಮೃತ ಮಹೋತ್ಸವ ಆಚರಿಸಿದ ಸಂದರ್ಭದಲ್ಲಿ ನಗರದ ಪೀಪಲ್ಸ್ ಪಾರ್ಕ್‌ನಲ್ಲಿ ಕಟ್ಟಡ ನಿರ್ಮಾಣ ಪ್ರಸ್ತಾವನೆಗೆ ಮಂಜೂರಾತಿ ದೊರೆತರೂ ನಗರದ ಕೇಂದ್ರ ಪರಿಸರ ಪ್ರೇಮಿಗಳು ತಡೆ ಒಡ್ಡಿ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ೨೦೦೪ರಲ್ಲಿ ಇತ್ಯರ್ಥವಾಗಿ ಕಟ್ಟಡ ನಿರ್ಮಾಣಕ್ಕೆ ನ್ಯಾಯಾಲಯ ಅನುಮತಿ ನೀಡಿದೆ. ಇಲ್ಲಿ ೨೭ ಮಂದಿ ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರೊಂದಿಗೆ ಒಬ್ಬರು ಕಂಪ್ಯೂಟರ್ ಆಪರೇಟರ್ ಹಾಗೂ ಮಾಸಿಕ ವೇತನ ಪಡೆಯುವ ಇಬ್ಬರು ಕಾರ್ಯನಿರ್ವಹಿಸುತ್ತಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯವು ಮಾನಸ ಗಂಗೋತ್ರಿಯ ಸುಂದರ ಪರಿಸರದಲ್ಲಿ ಸ್ಥಾಪಿತವಾಗಿದ್ದು, ಇಲ್ಲಿನ ಸಂಗ್ರಹ ಈಗ ೫.೬ ಲಕ್ಷ ಆಕರಗಳಿಗೂ ಮೀರಿದೆ. ಪ್ರಚಲಿತ ಮಾಹಿತಿ ಸೇವೆಯನ್ನು ಆಧರಿಸಿ ಗ್ರಂಥಾಲಯವನ್ನು ಸಾಂಪ್ರದಾಯಿಕ ಆಕರಗಳ ವಿಭಾಗ ಹಾಗೂ ಮಾಹಿತಿ ತಂತ್ರಜ್ಞಾನ ವಿಭಾಗಗಳೆಂದು ವಿಂಗಡಿಸಲಾಗಿದೆ. ಸಾಂಪ್ರದಾಯಿಕ ಆಕರಗಳ ವಿಭಾಗ ಪ್ರಮುಖವಾಗಿ ನಿಯತಕಾಲಿಕೆ, ಪ್ರಲೇಖ ಮತ್ತು ಪರಾಮರ್ಶನ ಗ್ರಂಥ ಎರವಲು, ಕನ್ನಡ ಗ್ರಂಥ ಸಂಗ್ರಹ, ಪುಸ್ತಕ ಪರಿಗ್ರಹಣೆ ಮತ್ತು ಇತರ ಭಾಷಾಸಂಗ್ರಹಗಳೆಂಬ ವಿಭಾಗಗಳಾಗಿವೆ. ತಾಂತ್ರಿಕ ವಿಭಾಗ ಅಂತರ್ಜಾಲ, ಸಿಡಿರಾಂ ದತ್ತಾಂಶಗಳು, ಪರಿವಿಡಿ ಸೇವೆ ಮತ್ತು ಮಲ್ಟಿಮೀಡಿಯಾ ಅಡಕ ತಟ್ಟೆಗಳ (ಸಿಡಿ) ಸಂಗ್ರಹ ಹೊಂದಿದೆ. ಇಲ್ಲಿ ಅಂತರ್ಜಾಲ ಸೌಲಭ್ಯ ಕಲ್ಪಿಸಲ್ಪಟ್ಟ ೨೨ ಗಣಕ ಯಂತ್ರಗಳಿದ್ದು, ಸಂಶೋಧನಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್ ಆಫ್ ಇಂಡಿಯಾ ಅವರು ಒದಗಿಸಿರುವ ೧೨೮ ಎ ಸಾಮರ್ಥ್ಯದ ಅಂತರ್ಜಾಲ ಸಂಪರ್ಕ ಪಡೆದುಕೊಂಡಿದೆ. ಮಾಹಿತಿ ತಂತ್ರಜ್ಞಾನ ವಿಭಾಗವು ಆಧುನಿಕ ಫ್ಯಾಕ್ಸ್ ಡೇಟಾ ಪ್ರೊಜೆಕ್ಟರ್, ಇ ಮೇಲ್, ಲೇಸರ್, ಸ್ಕ್ಯಾನಿಂಗ್ ಮುಂತಾದ ಸೌಲಭ್ಯ ಸಹ ಹೊಂದಿದೆ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿಯೂ ಸುಸಜ್ಜಿತ ಗ್ರಂಥಾಲಯವಿದೆ. ಅಲ್ಲದೆ, ಮಹಾರಾಜ ಕಾಲೇಜಿಗೆ ಸೇರಿದ ಗ್ರಂಥಾಲಯ, ಕೇಂದ್ರ ಶಾಸನತಜ್ಞರ ನಿರ್ದೇಶನಾಲಯ, ಪ್ರಾಚ್ಯಸಂಶೋಧನಾ

ಸಂಸ್ಥೆ, ರಾಜ್ಯ ಪುರಾತತ್ವ ಇಲಾಖೆ ಹಾಗೂ ಸಿ.ಎಫ್.ಟಿ.ಆರ್.ಐ. ಸಂಸ್ಥೆಗಳ ಗ್ರಂಥಾಲಯಗಳೂ ಉಲ್ಲೇಖಾರ್ಹವಾಗಿವೆ.

೧೯೯೦ರಲ್ಲಿ ಮೈಸೂರು ನಗರ ಗ್ರಂಥಾಲಯಗಳ ಒಕ್ಕೂಟವು (ಮೈಸೂರು ಸಿಟಿ ಲೈಬ್ರರೀಸ್ ಕನ್‌ಸೋರ್ಟಿಯಮ್) ಅಸ್ತಿತ್ವಕ್ಕೆ ಬಂದಿತು. ಮಾಹಿತಿ ಆಕರಗಳು ಮತ್ತು ಮೂಲಭೂತ ಸೌಲಭ್ಯಗಳ ವಿನಿಮಯದ ಉದ್ದೇಶಕ್ಕಾಗಿ ಕೆಲವು ಬುದ್ಧಿಜೀವಿಗಳು, ವಿಶ್ವವಿದ್ಯಾನಿಲಯದ ಕುಲಪತಿಗಳು, ಸಂಶೋಧನ ಸಂಸ್ಥೆಗಳ ನಿರ್ದೇಶಕರು ಮತ್ತು ಮೈಸೂರು ನಗರದ ಕೆಲವು ಗ್ರಂಥಪಾಲಕರು ಈ ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಹಲವು ಬಾರಿ ಸಭೆ ಸೇರಿ ಈ ಒಕ್ಕೂಟವನ್ನು ರಚಿಸಿದರು. ಮೈಸೂರು ನಗರದ ಗ್ರಂಥಾಲಯಗಳ ನಡುವೆ ಹೆಚ್ಚಿನ ಸಮನ್ವಯಸಾಧನೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ, ಸಂಶೋಧನೆ, ನಿಯತಕಾಲಿಕಗಳ ಪ್ರಕಟಣೆ, ತರಬೇತಿ ತರಗತಿಗಳನ್ನು ನಡೆಸುವುದು ಮೊದಲಾದ ಕ್ರಮಗಳ ಮೂಲಕ ಗ್ರಂಥಾಲಯ ಜಾಲದ ವಿಸ್ತರಣೆ ಹಾಗೂ ಪುನಶ್ಚೇತನ ಇದರ ಮುಖ್ಯ ಉದ್ದೇಶಗಳಾಗಿವೆ. ೧೯೯೫ರಲ್ಲಿ 'ಮೈಸೂರು ಲೈಬ್ರರಿ ನೆಟ್ ವರ್ಕ್ (ಮೈಲಿಬ್‌ನೆಟ್)' ಸ್ಥಾಪಿಸಲಾಯಿತು. ಮೈಸೂರು ಗ್ರಂಥಾಲಯ ಜಾಲದ ಚಟುವಟಿಕೆಗಳು ಮೈಸೂರು ನಗರ ಗ್ರಂಥಾಲಯ ಒಕ್ಕೂಟದ ಮೂಲ ಉದ್ದೇಶಗಳಿಗೆ ಸಹಾಯಕವಾಗಿದೆ.

ಮೈಸೂರಿನಲ್ಲಿ ಮೈಸೂರು ಗ್ರಂಥಪಾಲಕರ ಹಾಗೂ ಮಾಹಿತಿ ವಿಜ್ಞಾನಿಗಳ ಸಂಘ (ಎಂವೈಎಲ್‌ಐಎಸ್‌ಐ) ೨೦೦೧ರಲ್ಲಿ ಸ್ಥಾಪನೆಗೊಂಡಿದೆ. ಈ ಸಂಘ ಅತ್ಯಂತ ಉತ್ಸಾಹದಿಂದಲೂ ಪರಿಣಿತಿಯಿಂದಲೂ ಕಾರ್ಯಕ್ರಮಗಳನ್ನು ರೂಪಿಸಿ ಮಾಹಿತಿ ತಂತ್ರಜ್ಞಾನ ಅಳವಡಿಕೆ ಮತ್ತು ಸಾಂಪ್ರದಾಯಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಶ್ರಮಿಸುತ್ತಲಿದೆ.

೨೦೦೧ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೩೦ ಗ್ರಾಮಪಂಚಾಯತ್ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಅದೇ ೨೦೦೫ರ ಮಾರ್ಚ್ ಅಂತ್ಯಕ್ಕೆ ತಾಲೂಕಿನಲ್ಲಿ ೫೪ ಗ್ರಂಥಾಲಯಗಳಿದ್ದು, ೨೦೦೯ರ ಮಾರ್ಚ್ ಅಂತ್ಯಕ್ಕೂ ಅದೇ ಪರಿಸ್ಥಿತಿ ಇತ್ತು.

## ಗ್ರಾಮೀಣ ಕ್ರೀಡೆಗಳು

ಬೇಟೆ, ಕುದುರೆಸವಾರಿ, ಧನುರ್ವಿದ್ಯೆ, ಓಟ, ಈಜು ಮುಂತಾದ ಕ್ರೀಡೆಗಳ ಕುರಿತು ವೇದ ಉಪನಿಷತ್ತು, ರಾಮಾಯಣ, ಮಹಾಭಾರತ ಮುಂತಾದವುಗಳಲ್ಲಿ ಉಲ್ಲೇಖಗಳಿವೆ. ಪ್ರಾಚೀನ ವ್ಯವಸ್ಥೆಯಲ್ಲಿಯೂ ಬಲ ಸಂವರ್ಧನೆಗಾಗಿ ಈಜುವುದು, ಆನೆ, ಕುದುರೆಗಳ ಸವಾರಿಮಾಡುವುದು, ರಥ ಓಡಿಸುವುದು, ಕತ್ತಿವರಸೆ, ಈಟಿ ಎಸೆತ, ಕುಸ್ತಿ, ಮಲ್ಲಗಂಬ ಮುಂತಾದ ಕ್ರೀಡೆಗಳಿಗೆ ಪ್ರಾಧಾನ್ಯ ವೀಯುತ್ತಿದ್ದುದಾಗಿ ತಿಳಿದುಬರುತ್ತದೆ.

ಹಬ್ಬ ಹರಿದಿನ ರಾಜ ಮಹಾರಾಜರ, ಚಕ್ರವರ್ತಿಗಳ ವಿಜಯೋತ್ಸವ ಹಾಗೂ ಪುತ್ರೋತ್ಸವ, ರಾಜಕುಮಾರರ ವಿವಾಹ ಮುಂತಾದ ಶುಭ ಸಂದರ್ಭಗಳಲ್ಲಿ ಹಾಗೂ ರಾಜ್ಯಕ್ಕೆ ಆಗಮಿಸಿದ ಅತಿಥಿ ಅಭ್ಯಾಗತರ ಸತ್ಕಾರ ಸಮಾರಂಭಗಳ ಸಲುವಾಗಿ ಕ್ರೀಡೆಗಳನ್ನು ಏರ್ಪಡಿಸುವ ಪರಿಪಾಠವಿತ್ತು. ವಿಜಯನಗರ ಅರಸರ ಕಾಲದಲ್ಲಿ ಪ್ರಚಲಿತವಿದ್ದ ಕ್ರೀಡಾಕೂಟವನ್ನು ಇಂದು ದಸರ ಸಂದರ್ಭದಲ್ಲಿ ರಾಜ್ಯ ಹಾಗೂ ವಲಯ ಮಟ್ಟದಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ನಡೆಸುತ್ತಿರುವುದನ್ನು ಕಾಣಬಹುದು. ಗ್ರಾಮೀಣರು ಇವತ್ತಿಗೂ ಸಹ ಹಬ್ಬ ಹರಿದಿನಗಳ ಸಂದರ್ಭಗಳಲ್ಲಿ ವಿವಿಧ ಬಗೆಯ ಕ್ರೀಡೆ, ವಿನೋದಗಳಲ್ಲಿ ಕಾಲ ಕಳೆಯುವುದನ್ನು ನೋಡಬಹುದು.

ಗ್ರಾಮೀಣ ಪರಿಸರದಲ್ಲಿ ಹೆಚ್ಚಾಗಿ ಕಂಡು ಬರುವ ಮನರಂಜನೆಯೇ ಪ್ರಮುಖ ಉದ್ದೇಶವಾದ ಅನೇಕ ಬಗೆಯ ಜನಪದ ಆಟಗಳು ಇತರೆಡೆ ಕಂಡುಬರುವಂತೆ ಮೈಸೂರು ತಾಲೂಕಿನಲ್ಲಿಯೂ ಕಂಡುಬರುತ್ತವೆ. ಈ ಆಟಗಳನ್ನು ಒಳಾಂಗಣ ಆಟಗಳು ಮತ್ತು ಹೊರಾಂಗಣ ಆಟಗಳೆಂದು ವಿಭಾಗಿಸಿಕೊಳ್ಳಬಹುದು.

**ಒಳಾಂಗಣ ಆಟಗಳು :** ತಾಲೂಕಿನಲ್ಲಿ ಪ್ರಚಲಿತವಿರುವ ಒಳಾಂಗಣ ಆಟಗಳಲ್ಲಿ ಇತ್ತೀಚೆಗೆ ಬಳಕೆಗೆ ಬಂದಿರುವ ಇಸ್ಪೀಟನ್ನು ಬಿಟ್ಟರೆ, ಪಗಡೆ ಮತ್ತು ಚದುರಂಗ ಜನಪ್ರಿಯವಾಗಿವೆ. ತಾಲೂಕಿನಲ್ಲಿ ವಿಶೇಷವಾಗಿ ಪ್ರಚಲಿತವಾಗಿರುವ ಸಾಮಾನ್ಯವಾಗಿ ಕಿರಿಯರೇ ಭಾಗವಹಿಸುವ ಕೆಲವು ಆಟಗಳು ಹೀಗಿವೆ: ಅಣೆಕಲ್ಲು, ಹುಣಸೇ ಬೀಜದ ಆಟ, ಸರಿ–ಬೆಸ, ಉದ್ದಿನಮೂಟೆ ಆಟ, ಬಳೆಚೂರಿನ ಆಟ, ಹರಳುಮಣೆ ಆಟ, ಆನೆ–ಕುರಿ ಆಟ, ಹುಲಿ–ಕುರಿ ಆಟ, ಚೌಕಬಾರ, ಹಾವು–ಏಣಿ ಆಟ, ಇಪ್ಪತ್ತರಾಟ ಮುಂತಾದವು.

**ಹೊರಾಂಗಣ ಆಟಗಳು :** ಇಂದು ಗ್ರಾಮೀಣ ಭಾಗಗಳಲ್ಲೂ ಆಧುನಿಕ ವಿದ್ಯಾಭ್ಯಾಸ ಪದ್ಧತಿಯ ಶಾಲೆಗಳು ವ್ಯಾಪಕವಾಗಿ ಇರುವುದರಿಂದ ಆಯಾ ಶಾಲೆಗಳಲ್ಲಿ ಉತ್ತೇಜಿಸುವ ಪುಟ್‌ಬಾಲ್, ಕ್ರಿಕೆಟ್ ಇತ್ಯಾದಿ ಆಟಗಳು ಜನಪ್ರಿಯವಾಗುತ್ತಿವೆಯಾದರೂ ಹಲವು ಬಗೆಯ ಪ್ರಾಚೀನ ಜನಪದ ಆಟಗಳು ಎಷ್ಟೋ ಉಳಿದುಬಂದಿವೆ. ಸಾಹಸದ ಆಟಗಳಾದ ಕತ್ತಿವರಸೆ, ದೊಣ್ಣೆವರಸೆ, ಪಂಜು ತಿರುಗಿಸುವುದು ಮೊದಲಾದವು ಕುಟುಕು ಜೀವ ಉಳಿಸಿಕೊಂಡಿವೆ. ಹಿಂದಿನಿಂದಲೂ ರೂಢಿಯಲ್ಲಿದ್ದ ಕೊಕ್ಕೋ, ಕಬ್ಬಡಿ ಮೊದಲಾದುವು ಶಿಷ್ಟ ಕ್ರೀಡೆಗಳಾಗಿ ಬೆಳೆದಿವೆ. ಗ್ರಾಮೀಣ ಪರಿಸರಗಳಲ್ಲಿ ಕಾಣಿಸುವ ಕೆಲವು ಆಟಗಳು, ಉಪ್ಪೂಪೆಕಡ್ಡಿ, ಕಣ್ಣುಮುಚ್ಚಾಲೆ, ಕುಂಟಾಟ, ಕುಂಟೆಬಿಲ್ಲೆ, ಕಲ್ಲೋ ಮಣ್ಣೋ, ಕಾಚಿಕೋಲ್ ಬಂದಿಕೋಲ್, ರತ್ತೋ ರತ್ತೋ, ಟೋಪಿಯಾಟ, ಮರಕೋತಿ ಆಟ, ಗೋಲಿಯಾಟ, ಗಜ್ಜುಗದಾಟ, ಚೆಂಡಾಟ, ಲಗೋರಿ, ಬುಗರಿ ಆಟ, ಮೈಸೂರ್‌ಬಾಲ್ ಆಟ (ದುಬ್ಬ ಚೆಂಡಾಟ), ಟಾಂಗ್ ಬಿರಾಂಗ್ ಆಟ, ಕೋಲು ಹಾರಿಸುವ ಆಟ, ಚಿಣ್ಣಿಕೋಲಾಟ, ಸುರುಸುರುಕೆ ಬತ್ತಿ, ಮೊಟ್ಟೆಯಿಕ್ಕುವಾಟ, ಕೋಲಾಟ, ತೆಂಗಿನಕಾಯಿ ಜೂಜು, ನಿಂಬೆಹಣ್ಣು ಜೂಜು, ತ್ರಿರಂಗ, ಬಚ್ಚದಕಲ್ಲು, ಸೀಯುವ ಆಟ, ನರಿಕೊಂತನ ಆಟ, ಬಟ್ಟೆ ಆಟ,

ಹುಳಸಪ್ಪನ ಆಟ ಮುಂತಾದ ಆಟಗಳಿವೆ. ಮೈಸೂರು ನಗದಲ್ಲಿ ಹಲವಾರು ಕ್ರೀಡಾ ಕ್ಲಬು ಹಾಗೂ ಕ್ರೀಡಾಂಗಣಗಳಿವೆ.

ಪಾಶ್ಚಾತ್ಯ ಶಿಕ್ಷಣ ಪದ್ಧತಿ ಕರ್ನಾಟಕದಲ್ಲಿ ಜಾರಿಗೆ ಬಂದಾಗಿನಿಂದ ಶಾಲಾಕಾಲೇಜುಗಳಲ್ಲಿ ಪಾಶ್ಚಾತ್ಯ ಶೈಲಿಯ ಕೆಲವು ಕ್ರೀಡೆಗಳನ್ನು ಪಠ್ಯೇತರ ಚಟುವಟಿಕೆಯಾಗಿ ಪರಿಗಣಿಸಲಾಯಿತು. ೧೯೨೭ರಲ್ಲಿ ಆಗಿನ ಮೈಸೂರು ಸರ್ಕಾರ ಒಲಂಪಿಕ್ ಸಮಿತಿಯನ್ನು ನೇಮಕ ಮಾಡಿದ್ದು ಈ ನಿಟ್ಟಿನಲ್ಲಿ ಪ್ರಥಮ ಪ್ರಯತ್ನ. ಶಿಕ್ಷಣ ಇಲಾಖೆಯ ನಿರ್ದೇಶಕರು ಅಧ್ಯಕ್ಷರಾಗಿದ್ದ ಈ ಸಮಿತಿ ಮೈಸೂರು ಒಲಂಪಿಕ್ಸ್ ಎಂಬ ಹೆಸರಿನಿಂದ ಹಲವು ಪಂದ್ಯಗಳನ್ನು ನಡೆಸಿತು. ಎ.ಸಿ.ದಾಸ್ ಅವರು ಇದರ ಮೊದಲ ಕಾರ್ಯದರ್ಶಿಯಾಗಿದ್ದರು. ಈ ಸಮಿತಿ ಸುಮಾರು ೧೯೪೭ರವರೆಗೂ ಕ್ರಿಯಾಶೀಲವಾಗಿತ್ತು.

ವಿಜಯನಗರ ಸಾಮ್ರಾಜ್ಯದ ನಾಡಹಬ್ಬ ಆಚರಣೆಯ ಸಂದರ್ಭದಲ್ಲಿ ನಡೆಯುತ್ತಿದ್ದ ಉತ್ಸವಗಳಲ್ಲಿ ಕ್ರೀಡೆಗಳು ಬಹಳಷ್ಟು ಆಕರ್ಷಕವಾಗಿದ್ದವು. ಕುದುರೆಸವಾರಿ, ಕತ್ತಿವರಸೆ, ದೊಣ್ಣೆವರಸೆ ಹಾಗೂ ಕುಸ್ತಿ ಪ್ರಮುಖ ಆಕರ್ಷಣೀಯ ಆಟಗಳಾಗಿದ್ದವು. ವಿಜಯನಗರದ ನಂತರ ಮೈಸೂರು ಅರಸರ ಆಳ್ವಿಕೆಯಲ್ಲಿ ಕ್ರೀಡೆಗಳಿಗೆ ಮಹತ್ವದ ಪ್ರೋತ್ಸಾಹ ಲಭ್ಯವಾಗಿತ್ತು. ಜನಸಮೂಹದ ಕ್ರೀಡೆಯಾಗಿ ಕುಸ್ತಿ ಸ್ಪರ್ಧೆಗಳು ಹಬ್ಬ–ಹರಿದಿನವೆನ್ನದೆ ಜಾತ್ರೆಗಳಲ್ಲಿಯೂ ನಡೆಯಲಾರಂಭಿಸಿದವು. ಕುಸ್ತಿಪಟುಗಳಿಗೆ ಬಹುಮಾನ, ಬಿರುದು ಬಾವಲಿಗಳನ್ನಿತ್ತು ಗೌರವಿಸುವ ಸಂಪ್ರದಾಯ ಹುಟ್ಟಿಕೊಂಡಿತು.

**ದಸರಾ ಕ್ರೀಡೆಗಳು :** ವಿಜಯದಶಮಿಯ ಸಂದರ್ಭದಲ್ಲಿ ಮೈಸೂರು ಒಡೆಯರ ದರ್ಬಾರಿನಲ್ಲಿ ವಿಶೇಷವಾಗಿ ಜಟ್ಟಿಕಾಳಗ ಹಾಗೂ ಕುಸ್ತಿಗಳನ್ನು ಏರ್ಪಡಿಸಲಾಗುತ್ತಿತ್ತು. ಇಷ್ಟಲ್ಲದೆ, ವಿಜೇತರಿಗೆ ಬಹುಮಾನ ಬಿರುದುಗಳೊಂದಿಗೆ ಸನ್ಮಾನಿಸಲಾಗುತ್ತಿತ್ತು. ಇಂತಹ ಕ್ರೀಡೆಗಳಿಗೆ ವಿಶೇಷವಾಗಿ ಕುಸ್ತಿ ಸ್ಪರ್ಧೆಗೆ ರಾಜ್ಯ ಹಾಗೂ ರಾಷ್ಟ್ರಗಳಿಂದ ಅತ್ಯುತ್ತಮ ಕುಸ್ತಿಪಟ್ಟುಗಳನ್ನು ಆಹ್ವಾನಿಸಲಾಗುತ್ತಿತ್ತು. ಪ್ರತಿಷ್ಠೆಯ ಪ್ರತೀಕವಾದ ಈ ಸ್ಪರ್ಧೆಗೆ ವಿಶಿಷ್ಟವಾದ ತಯಾರಿಯೊಂದಿಗೆ ಕುಸ್ತಿಪಟುಗಳಿಗಾಗಿ ಆಯ್ಕೆ ನಡೆಯುತ್ತಿದ್ದು ಇದು ಅರಸರ ಸಮ್ಮುಖದಲ್ಲೇ ನಡೆಯುತ್ತಿದ್ದುದ್ದು ಒಂದು ವಿಶೇಷ. ಇಷ್ಟಲ್ಲದೆ ಪ್ರತ್ಯೇಕವಾಗಿ ಸೈನಿಕರ ಕವಾಯಿತು ಪ್ರದರ್ಶನ, ಕತ್ತಿವರಸೆ, ಕುದುರೆಸವಾರಿ, ಭಾರ ಎತ್ತುವ ಸ್ಪರ್ಧೆ ಮೊದಲಾದ ಹತ್ತು ಹಲವು ಕ್ರೀಡಾ ಸ್ಪರ್ಧೆಗಳು ಕುಸ್ತಿಯೊಂದಿಗೆ ಸೇರ್ಪಡೆಯಾದವು.

ನಗರದ ವಿವಿಧ ಮೊಹಲ್ಲಾಗಳಲ್ಲಿ ಗರಡಿ ಮನೆಗಳಿದ್ದು, ಗರಡಿಯಲ್ಲಿ ನಿತ್ಯ ತಾಲೀಮು ತೀರಾ ಇತ್ತೀಚಿನವರೆವಿಗೂ ನಡೆಯುತ್ತಿತ್ತು. ಇಟ್ಟಿಗೆಗೂಡು, ನಜರಬಾದ್, ಬೆಳ್ಳಿಕಟ್ಟಿಗೆ ಮಿಷನ್, ಕನ್ನೇಗೌಡನ ಕೊಪ್ಪಲು, ಸುಣ್ಣದಕೇರಿ, ಹಳ್ಳದಕೇರಿ, ಮಂಡಿಮೊಹಲ್ಲಾ, ಕುಂಚಿಟಿಗರ ಬೀದಿ, ಮುಂತಾದೆಡೆ ಈಗಲೂ ಗರಡಿ ಮನೆಗಳಿವೆಯಾದರೂ ಹಿಂದಿನ ವೈಭವ ಉಳಿದಿಲ್ಲ. ಮೈಸೂರಿನ ಪೈಲ್ವಾನರು ಕೇವಲ ಮೈಸೂರಿಗಷ್ಟೇ ತಮ್ಮ ಪ್ರತಿಷ್ಠೆ

ಬೀರದೆ, ಉತ್ತರಭಾರತದ ಪೈಲ್ವಾನರ ಗಮನವನ್ನೂ ತಮ್ಮೆಡೆಗೆ ಸೆಳೆದರು. ಜಗಜಟ್ಟಿಗಾಮ, ಇಮಾಮ್ ಭಕ್ಷಿ, ಹಮೀದ್ ಮತ್ತು ಗಾಮನ ಅಣ್ಣನ ಮಕ್ಕಳಾದ ಬೋಲು ಗೂಗಾ, ಅಸ್ಲಂ, ಅಕ್ರಂ ಮತ್ತು ಅಜಾ, ಗುಂಗಾ, ಗಾಮ, ಕಂದ್ರಕ್, ಫಜಲ್, ಅಂತೋಣಿ ಮೊದಲಾದವರು ಮೈಸೂರಿಗೆ ಆಗಾಗ್ಗೆ ಬಂದು ಇಲ್ಲಿನ ಜಟ್ಟಿಗಳೊಡನೆ ಬೆರೆತು ಈ ಕಲೆ ಉನ್ನತ ಮಟ್ಟಮುಟ್ಟಲು ಸಹಾಯಕರಾಗಿದ್ದುದೇ ಸಾಕ್ಷಿ. ಇಷ್ಟಲ್ಲದೆ ನಾಲ್ವಡಿ ಕೃಷ್ಣರಾಜ ಒಡೆಯರು ೧೯೧೧ರಲ್ಲಿ ದೆಹಲಿಯ ದರ್ಬಾರಿನಲ್ಲಿ ನಡೆದ ಐದನೆಯ ಜಾರ್ಜ್‌ನ ಕಿರೀಟಧಾರಣಾ ಸಮಾರಂಭಕ್ಕೆ ಮೈಸೂರಿನ ಹೆಸರಾಂತ ಪೈಲ್ವಾನರಾಗಿದ್ದ ಪಾಪಯ್ಯ, ದೊಡ್ಡತಿಮ್ಮಯ್ಯ, ಕೊಪ್ಪಲು ಬಸವಯ್ಯ, ಚೆನ್ನಯ್ಯ, ಕುರೇಶಿ ಮುಂತಾದವರನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಹೋಗಿದ್ದುದು ಪೈಲ್ವಾನರಿಗೆ ಕೊಡುತ್ತಿದ್ದ ಗೌರವಕ್ಕೆ ಸಾಕ್ಷಿ. ಪೈಲ್ವಾನ ಪಾಪಯ್ಯನವರು ದೆಹಲಿಯ ದರ್ಬಾರಿನಲ್ಲಿಯೂ ಬಹುಮಾನಗಳಿಸಿ ಕರ್ನಾಟಕದ ಕೀರ್ತಿ ಮುಕುಟವನ್ನು ಎತ್ತಿಹಿಡಿದಿದ್ದರು. ಪೈಲ್ವಾನ್ ರುದ್ರ ಉರುಫ್ ಮೂಗ, ಲಕ್ಷ್ಮಣ್, ನಾರಾಯಣ ಮುಂತಾದವರು ೧೯೭೦ರ ದಶಕದಲ್ಲಿ ಮನೆಮಾತಾಗಿದ್ದು, ಮಾರ್ಫಿಟು ಕುಸ್ತಿಗಳೂ ಇಂದಿನ ಸಾಹುಕಾರ್ ಚೆನ್ನಯ್ಯನವರ ಕುಸ್ತಿ ಅಖಾಡದಲ್ಲಿ ಜರುಗುತ್ತಿದ್ದು, ಭಾನುವಾರ ಬಂತೆಂದರೆ ಕುಸ್ತಿ ಅಖಾಡದಲ್ಲಿ ಜನಗಳ ಜಾತ್ರೆ ಸೇರುತ್ತಿತ್ತು.

ಕರ್ನಾಟಕದ ಏಕೀಕರಣಾನಂತರ ರಾಜ್ಯಮಟ್ಟದಲ್ಲಿ ದಸರಾ ಕ್ರೀಡೆಗಳು ಆರಂಭವಾದವು. ೧೯೬೦ರಲ್ಲಿ ಸ್ಥಾಪಿತವಾದ ರಾಜ್ಯ ಕ್ರೀಡಾಮಂಡಳಿ ೧೯೬೧ರಿಂದ ದಸರಾ ಕ್ರೀಡೆಗಳನ್ನು ನಡೆಸುವ ಹೊಣೆ ಹೊತ್ತಿದೆ. ಇದು ಮಂಡಳಿಯ ಪ್ರಧಾನ ಕಾರ್ಯಕ್ರಮಗಳಲ್ಲಿ ಒಂದು. ಇಲ್ಲಿ ಅಥ್ಲೆಟಿಕ್ಸ್‌ಗಳಲ್ಲದೆ ಫುಟ್‌ಬಾಲ್, ಬ್ಯಾಸ್ಕೆಟ್‌ಬಾಲ್, ಟೆನ್ನಿಸ್, ಹಾಕಿ, ಕಬಡ್ಡಿ, ಖೋ-ಖೋ, ಈಜು, ಭಾರವೆತ್ತುವ ಸ್ಪರ್ಧೆ, ಕುಸ್ತಿ, ವಾಲಿಬಾಲ್, ಬ್ಯಾಡ್ಮಿಂಟನ್ ಹಾಗೂ ಅಂಗಸೌಷ್ಠವ ಸ್ಪರ್ಧೆಗಳೂ ಜರುಗುತ್ತವೆ.

ಮೈಸೂರು ವಿಶ್ವವಿಖ್ಯಾತ ಕವಿಗಳಿಗೆ, ಕಲಾವಿದರಿಗೆ, ವಿಜ್ಞಾನಿಗಳಿಗೆ ವಿದ್ವಾಂಸರಿಗೆ ಆಶ್ರಯ ನೀಡಿದ್ದಂತೆಯೇ ಪ್ರಸಿದ್ಧ ಕ್ರೀಡಾಪಟುಗಳಿಗೂ ತವರು ಮನೆಯಾಗಿದೆ. ನಾಡಿನ ಅನೇಕ ಭಾಗಗಳಲ್ಲಿ ಜನಿಸಿದ ಕ್ರೀಡಾಪಟುಗಳು ಮೈಸೂರಿನಲ್ಲಿ ತರಬೇತು ಪಡೆದು ಮೈಸೂರಿನ ಹೆಸರನ್ನು ಉನ್ನತ ಮಟ್ಟಕ್ಕೇರಿಸಿದ್ದಾರೆ.

ಅಥ್ಲೆಟಿಕ್ಸ್ ಸಂಸ್ಥೆ ೧೯೫೨ರಲ್ಲಿ ಮೈಸೂರು ರಾಜ್ಯ ಅಮೆಚೂರ್ ಅಥ್ಲೆಟಿಕ್ಸ್ ಸಂಸ್ಥೆ ಎಂಬ ಹೆಸರಿನಲ್ಲಿ ಸ್ಥಾಪಿತವಾಯಿತು. ಕೆ.ಎ.ನೆಟ್ಟಕಲ್ಲಪ್ಪ, ಎ.ಆರ್.ಚಿಕ್ಕಪಾಪಯ್ಯ, ಪಿ.ಐ.ಜೋಸೆಫ್, ಕೆ.ಗುಂಡುರಾವ್, ಮುಂತಾದವರು ಇದರ ಸ್ಥಾಪನೆಗೆ ಶ್ರಮಿಸಿದ್ದರು. ಸಿ.ಚಾಂಡಿ ಎಂಬುವರು ಇದರ ಮೊದಲ ಅಧ್ಯಕ್ಷರು. ಇಲ್ಲಿ ತರಬೇತಿ ಪಡೆದ ಅನೇಕ ಕ್ರೀಡಾಳುಗಳು ೧೯೬೪ರಲ್ಲಿ ಒಲಂಪಿಕ್ಸ್, ಕಾಮನ್ ವೆಲ್ತ್ ಮುಂತಾದ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದಾರೆ. ಕೆನೆತ್ ಪೊವೆಲ್ (ಅರ್ಜುನ ಪ್ರಶಸ್ತಿ ವಿಜೇತ), ನಿರ್ಮಲಾ ಉತ್ತಯ್ಯ,

ಡಯಾನಾ ಸೈಮ್, ಐರೀನ್ ಸಲ್ಡಾನಾ, ಮಾರಿವರ್ಗಿಸ್, ಜಲಜನಾಥನ್, ಏಂಜಲ್ ಮೇರಿ ಮುಂತಾದವರು ಇಂತಹವರಲ್ಲಿ ಹಲವರು.

೧೯೩೦ರಲ್ಲಿ ಹಾಕಿ ಸಂಸ್ಥೆ ಪ್ರಾರಂಭಗೊಂಡಿತು. ಬ್ರಿಟಿಷರ ಆಗಮನದ ನಂತರ ಭಾರತದಲ್ಲಿ ಹಾಕಿ ಆಟಕ್ಕೆ ಪ್ರಾಮುಖ್ಯತೆ ಲಭ್ಯವಾಯಿತು. ಕರ್ನಾಟಕದಲ್ಲಿ ಅದರಲ್ಲೂ ಅಂದಿನ ಮೈಸೂರು ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು ಮತ್ತು ಮೈಸೂರು ಸೇನಾ ತುಕಡಿಗಳ ಕೇಂದ್ರಸ್ಥಾನವಾದ್ದರಿಂದ ಆ ಎರಡೂ ಕೇಂದ್ರಗಳಲ್ಲಿ ಹಾಕಿ ಆಟ ಪ್ರಬಲವಾಗಿ ಬೆಳೆಯಿತು. ಹಾಕಿ ದಸರಾ ಕ್ರೀಡಾಕೂಟದ ಮತ್ತೊಂದು ಆಕರ್ಷಕ ಪಂದ್ಯಾವಳಿ ಎನಿಸಿತು. ಮೈಸೂರಿಗೆ ರಾಜ್ಯದ ಎಲ್ಲಾ ಯುವ ತಂಡಗಳು ಬಂದು ಭಾಗವಹಿಸುತ್ತಿವೆ. ಮೈಸೂರಿನ ಅನೇಕರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಾಕಿ ಪಂದ್ಯಾವಳಿಯಲ್ಲಿದ್ದಾರೆ.

೧೯೩೭ರಲ್ಲಿ ಮೈಸೂರು ರಾಜ್ಯ ಫುಟ್‌ಬಾಲ್ ಸಂಸ್ಥೆ ಸ್ಥಾಪಿತವಾಯಿತು. ಅಂದಿನ ದೈಹಿಕ ಶಿಕ್ಷಣ ಅಧಿಕಾರಿಗಳಾಗಿದ್ದ ವೆಂಕಟರಮಣ ಇದರ ಸ್ಥಾಪನೆಗೆ ಕಾರಣಕರ್ತರು. ೧೯೪೦ರ ಸುಮಾರಿನಲ್ಲಿ ಪೊಲೀಸ್ (ಬೆಂಗಳೂರು ಮತ್ತು ಮೈಸೂರು), ಯುನೈಟೆಡ್ ಫ್ರೆಂಡ್ಸ್ ಮತ್ತು ಇಟಾಲಿಯನ್ ಪ್ರಿಸಿಡನ್ಸ್ ಆಫ್ ವಾರ್ ಮೊದಲಾದ ತಂಡಗಳು ಪ್ರಸಿದ್ಧವಾಗಿದ್ದವು. ಬ್ರಿಟಿಷ್ ಆಳ್ವಿಕೆಯಲ್ಲಿ ಸೈನ್ಯದ ತುಕಡಿಗಳಲ್ಲಿ ಮನರಂಜನೆ ಹಾಗೂ ದೈಹಿಕ ಸಾಮರ್ಥ್ಯಕ್ಕಾಗಿ ಇದ್ದ ಈ ಕ್ರೀಡೆ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಮೊಟ್ಟಮೊದಲು ಪ್ರಾರಂಭವಾಯಿತು. ಮೈಸೂರು ಫುಟ್‌ಬಾಲ್ ಕಮಿಟಿ ಎಂಬ ನಾಮಾಂಕಿತಗೊಂಡ ಈ ಎರಡು ಸಮಿತಿಗಳು ಇಡೀ ಫುಟ್‌ಬಾಲ್ ಆಟದ ಮೇಲೆ ಹಿಡಿತವನ್ನು ಹೊಂದಿದ್ದುವು. ಮೈಸೂರಿನಲ್ಲಿ ಈ ಆಟಕ್ಕೆ ರಾಜಾಶ್ರಯ ದೊರೆಯುತ್ತಿತ್ತು. ಆ ಸಂದರ್ಭದಲ್ಲಿ ಹಲವು ಫುಟ್‌ಬಾಲ್ ಕ್ಲಬ್‌ಗಳು ಹುಟ್ಟಿಕೊಂಡವು. ಮೈಸೂರು ಸಂಸ್ಥಾನ ತನ್ನದೇ ಆದ ಕೆಲವು ಚಾಂಪಿಯನ್‌ಶಿಪ್‌ಗಳನ್ನು ನಡೆಸುವುದರ ಮೂಲಕ ಆಟಗಾರರ ಮತ್ತು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು. ಮೈಸೂರು ರಾಜ್ಯ ತಂಡ ೧೯೪೬, ೧೯೫೨, ೧೯೬೭ ಮತ್ತು ೧೯೬೯ರಲ್ಲಿ ತನ್ನ ಅಧಿಪತ್ಯ ಪಡೆದು ಇಡೀ ಭಾರತವೇ ನಿಬ್ಬೆರಗಾಗುವಂತೆ ಮಾಡಿತು. ಭಾರತದ ಅಗ್ರಮಾನ್ಯ ಆಟಗಾರರ ಪಟ್ಟಿಯಲ್ಲಿ ಹಾಗೂ ಭಾರತದ ಫುಟ್‌ಬಾಲ್ ಇತಿಹಾಸದಲ್ಲಿ ಬೆಂಗಳೂರಿನ ಹಾಗೂ ಮೈಸೂರಿನ ಹೆಸರನ್ನು ಎಂದೆಂದಿಗೂ ಉಳಿಯುವಂತೆ ಮಾಡಿದ ಲಕ್ಷ್ಮೀನಾರಾಯಣ, ರಮಣ, ಧನರಾಜ್, ಅಹಮದ್, ಖಾನ್, ರಾಮನ್, ಟಿ.ಷಣ್ಮುಗನ್, ಅರಮುನಿಗೇಯನ್, ಅಲಪಾತ್ ಅಹಮದ್, ಕೃಷ್ಣೋಜಿರಾವ್, ಪಾಪಣ್ಣ, ರಾಜಣ್ಣ, ಜಾವಾಮೂರ್ತಿ, ಕತ್ತರಿ ಶ್ರೀನಿವಾಸ್, ಅಪ್ಸರಾ ಶ್ರೀನಿವಾಸ್, ಜಯಣ್ಣ, ಮೋಹನ, ದೇವೀಪ್ರಸಾದ್ ಮೊದಲಾದ ಆಟಗಾರರಿದ್ದಾರೆ.

೧೯೪೧ರಲ್ಲಿ ಮೈಸೂರು ರಾಜ್ಯದ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಸ್ಥಾಪನೆಯಾಯಿತು. ೧೯೪೬ರಲ್ಲಿ ಮೈಸೂರು ಪಂಗಡ ರಾಷ್ಟ್ರೀಯ ಪ್ರಶಸ್ತಿ ಗೆದ್ದಿತು. ೧೯೫೧ರಲ್ಲಿ ನಡೆದ

ಏಷ್ಯನ್ ಕ್ರೀಡೆಗಳಲ್ಲಿ ಲಕ್ಷ್ಮೀನಾರಾಯಣ, ಪಾಪಯ್ಯ ಮತ್ತು ಅಪ್ಪಯ್ಯ ಭಾಗವಹಿಸಿದರು. ಮಹಿಳಾ ಆಟಗಾರರ ಮಟ್ಟ ಕೂಡ ೧೯೬೦, ೧೯೬೩, ೧೯೬೪ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ.

೧೯೫೫ರಲ್ಲಿ ಮೈಸೂರು ರಾಜ್ಯದ ಬಾಲ್‌ಬ್ಯಾಡ್ಮಿಂಟನ್ ಸಂಸ್ಥೆ ಸ್ಥಾಪನೆಯಾಯಿತು. ಇದು ಬಾಲ್‌ಬ್ಯಾಡ್ಮಿಂಟನ್ ಫೆಡರೇಷನ್ ಆಫ್ ಇಂಡಿಯಾದ ಸದಸ್ಯತ್ವವನ್ನು ಪಡೆದಿದೆ. ಮುಖ್ಯವಾಗಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಪಂದ್ಯಗಳನ್ನು ನಡೆಸುತ್ತದೆ. ಪ್ರಸಿದ್ಧ ಬ್ಯಾಡ್ಮಿಂಟನ್ ಆಟಗಾರ್ತಿಯಾದ ಜಯಮ್ಮ (ಅರ್ಜುನ ಪ್ರಶಸ್ತಿ ಪುರಸ್ಕೃತೆ) ಮುಂತಾದವರು ಪ್ರಮುಖರು.

**ಕ್ರಿಕೆಟ್ :** ಕರ್ನಾಟಕದಲ್ಲಿ ಕ್ರಿಕೆಟ್ ೨೦ನೆಯ ಶತಮಾನದ ಮೂರನೆಯ ದಶಕದಿಂದಲೂ ಜನಪ್ರಿಯ ಕ್ರೀಡೆಯೆನಿಸಿದೆ. ೧೯೩೩-೩೪ರಲ್ಲಿ ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್ ರಾಜ್ಯದ ಕ್ರಿಕೆಟ್ ಕ್ರೀಡೆಯ ಹೊಣೆ ಹೊತ್ತಿದೆ. ಇದು ಜೆ.ಸಿ.ರೋಲೋ, ಪಿ.ಮೇದಪ್ಪ, ಟಿ.ಮುರಾರಿ, ವೈ.ವಿ.ಕೆ.ಮೂರ್ತಿ, ಎಂ.ಜಿ. ವಿಜಯಸಾರಥಿ, ಎಂ.ಚಿನ್ನಸ್ವಾಮಿ ಮೊದಲಾದವರ ಮೂಲ ಪ್ರಯತ್ನದಿಂದ ಪ್ರಾರಂಭಗೊಂಡಿತು. ಮೈಸೂರು ನಗರದಲ್ಲೂ ಅನೇಕ ಸಂಘಸಂಸ್ಥೆಗಳು ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸುತ್ತವೆ. ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಕ್ರಿಕೆಟ್ ಸೇರಿದಂತೆ ಹಲವಾರು ಕ್ರೀಡೆಗಳಿಗೆ ತರಬೇತು ನೀಡಿ ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಪಟುಗಳನ್ನು ತಯಾರು ಮಾಡುತ್ತಿದೆ. ನಗರದಲ್ಲಿ ಮಹಿಳಾ ಕ್ರಿಕೆಟ್ ತಂಡಗಳೂ ಇವೆ.

**ಖೊ-ಖೊ :** ಇದರ ಮೂಲ ಮಹಾರಾಷ್ಟ್ರ ಆದರೂ ಕರ್ನಾಟಕದಲ್ಲಿ ಈ ಆಟವು ಬಹಳ ಹಿಂದಿನಿಂದಲೂ ಚಾಲ್ತಿಯಲ್ಲಿರುವುದಕ್ಕೆ ನಿದರ್ಶನಗಳಿವೆ. ಪ್ರಾರಂಭದಲ್ಲಿ ಅನೇಕ ನಿಯಮಗಳಿಂದ ಕೂಡಿದ್ದ ಈ ಆಟ ೧೯೫೦ರಲ್ಲಿ ಹಲವು ರೂಪಾಂತರಗಳನ್ನು ಹೊಂದಿತು. ಮೈಸೂರಿನ ಅರಸು ಬೋರ್ಡಿಂಗ್ ಶಾಲೆಯ ವತಿಯಿಂದ ಇದರ ಪಂದ್ಯಾವಳಿಗಳನ್ನು ನಡೆಸಲಾಯಿತು. ಪ್ರಾರಂಭದಲ್ಲಿ ಮಹಾರಾಜ ಪ್ರೌಢಶಾಲೆ, ಪಿ.ಬನುಮಯ್ಯ ಪ್ರೌಢಶಾಲೆ, ದಳವಾಯಿ ಪ್ರೌಢಶಾಲೆ ಮತ್ತು ಶಾರದಾವಿಲಾಸ ಪ್ರೌಢಶಾಲೆಗಳನ್ನೊಳಗೊಂಡಂತೆ ಅರಸು ಬೋರ್ಡಿಂಗ್ ಹೋಂ ಪಂದ್ಯವನ್ನು ನಡೆಸಿದ ದಾಖಲೆ ಇದೆ. ಆನಂತರ ಎಂ.ಜಿ.ಎಸ್. ಅಂತರ ಕಾಲೇಜುಗಳ ಕ್ರೀಡಾಕೂಟದಲ್ಲಿ ಇದನ್ನು ಏರ್ಪಡಿಸುವುದರೊಂದಿಗೆ ಅಂತರ ಕಾಲೇಜು ಹಾಗೂ ಅಂತರ ವಿಶ್ವವಿದ್ಯಾಲಯಗಳಲ್ಲಿ ಈ ಆಟ ಪ್ರಸಿದ್ಧಿ ಹೊಂದಿತು. ಈ ಕ್ರೀಡೆ ದಸರಾ ಕ್ರೀಡಾಕೂಟದ ಮುಖ್ಯ ಆಕರ್ಷಣೆಯಾಗಿ ಖೊಖೊ ಮಾರ್ಪಟ್ಟಿತು. ಮೈಸೂರಿನ ಪಯನೀರ್ಸ್ ಮೊದಲಾದ ಸ್ಥಳೀಯ ತಂಡಗಳು ಈ ಕ್ರೀಡೆಯನ್ನು ಆಯೋಜಿಸಿದವು. ೧೯೫೩ರಲ್ಲಿ ಮೈಸೂರು ರಾಜ್ಯ ಖೊಖೊ, ಕಬಡ್ಡಿ ಅಸೋಸಿಯೇಷನ್ ಪ್ರಾರಂಭವಾಯಿತು. ಅಖಿಲ ಭಾರತ ವಿಶ್ವವಿದ್ಯಾಲಯ ಚಾಂಪಿಯನ್‌ನಲ್ಲಿ ಮೈಸೂರು ವಿಶ್ವವಿದ್ಯಾನಿಲಯ ತನ್ನ ಸಾಧನೆಯನ್ನು ಗೈದು ಇತಿಹಾಸ ನಿರ್ಮಿಸಿದೆ.

**ವಾಲಿಬಾಲ್:** ವೈ.ಎಂ.ಸಿ.ಎ. ಮದರಾಸು ಇವರ ಸಹಕಾರದೊಂದಿಗೆ ಈ ಕ್ರೀಡೆಯನ್ನು ಪ್ರಾರಂಭಿಸಲಾಯಿತು. ಇದಕ್ಕೂ ಕೆಲವು ಆಸಕ್ತ ಯುವಕರು ಬೇರೆಬೇರೆ ಚೆಂಡುಗಳ ಸಹಾಯದಿಂದ ಈ ಆಟವನ್ನು ಆಡುತ್ತಿದ್ದುದುಂಟು. ೧೯೪೪ರಲ್ಲಿ ಕರ್ನಾಟಕ ವಾಲಿಬಾಲ್ ಸಂಸ್ಥೆ ಸ್ಥಾಪನೆಯಾಯಿತು. ೧೯೫೪ರಲ್ಲಿ ಹಾಸನದಲ್ಲಿ ಪ್ರಪ್ರಥಮ ಜಿಲ್ಲಾ ವಾಲಿಬಾಲ್ ಸಂಸ್ಥೆ ಪ್ರಾರಂಭಗೊಂಡಿತು. ಆನಂತರ ತುಮಕೂರು, ಮಂಡ್ಯ, ಮೈಸೂರು, ಬೆಂಗಳೂರು ಮತ್ತು ಕೋಲಾರ ಜಿಲ್ಲಾ ವಾಲಿಬಾಲ್ ಸಂಸ್ಥೆಗಳು ತಲೆ ಎತ್ತಿದುವು. ಇಂದು ಮೈಸೂರಿನಲ್ಲಿ ಅನೇಕ ವಾಲಿಬಾಲ್ ತಂಡಗಳಿದ್ದು, ಹೊನಲು ಬೆಳಕಿನ ಸ್ಪರ್ಧೆಗಳೂ ಸೇರಿದಂತೆ ಪಂದ್ಯಗಳನ್ನು ಆಯೋಜಿಸುತ್ತವೆ.

**ಕಬಡ್ಡಿ:** ಭಾರತದಾದ್ಯಂತ ಗ್ರಾಮೀಣ ಮಕ್ಕಳ ಮೆಚ್ಚಿನ ಆಟವಾಗಿ ರೂಪುಗೊಂಡ ಕಬಡ್ಡಿ ನೂರಾರು ವರ್ಷಗಳ ಇತಿಹಾಸವನ್ನು ಹೊಂದಿದೆ. ೧೯೫೩ರಲ್ಲಿ ಖೊಖೊದ ಜೊತೆ ಜಂಟಿ ಸಂಸ್ಥೆಯಾಗಿ ಪ್ರಾರಂಭವಾದ ಕಬಡ್ಡಿ ಸಂಸ್ಥೆ ೧೯೫೫ರಲ್ಲಿ ತನ್ನದೇ ಆದ ಸಂಸ್ಥೆಯನ್ನು ಸ್ಥಾಪಿಸಿಕೊಂಡಿತು. ಜಾತ್ರೆಗಳಲ್ಲಿ ಹಬ್ಬಹರಿದಿನಗಳನ್ನೊಳಗೊಂಡಂತೆ ದಸರಾ, ರಾಜ್ಯೋತ್ಸವ, ರಾಷ್ಟ್ರೀಯ ಹಬ್ಬಗಳು ಹೀಗೆ ಹತ್ತಾರು ಸಂದರ್ಭಗಳಲ್ಲಿ ಈ ಕ್ರೀಡೆಯನ್ನು ಆಡಲು ಪ್ರಾರಂಭಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗ ಸೇರಿದಂತೆ ಹಲವಾರು ಕಬಡ್ಡಿ ತಂಡಗಳಿದ್ದು, ಅನೇಕ ಆಟಗಾರರನ್ನು ತರಬೇತುಗೊಳಿಸುತ್ತಿದೆ.

**ಈಜು :** ಮೈಸೂರು ರಾಜ್ಯದ ಈಜು ಸಂಘ ಪ್ರಾರಂಭಗೊಂಡು ಹಲವು ವರ್ಷಗಳಾದರೂ ಮೊದಲ ಸಾಧನೆ ೧೯೬೦ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ಚಿನ್ನದ ಪದಕ ಪಡೆಯುವುದರೊಂದಿಗೆ ತನ್ನ ಹೆಸರನ್ನು ರಾಷ್ಟ್ರೀಯ ಈಜು ಸ್ಪರ್ಧೆಗಳಲ್ಲಿ ದಾಖಲಿಸಿತು. ಶಾಲಾಕಾಲೇಜುಗಳಿಂದ ಹಿಡಿದು ವಿಶ್ವವಿದ್ಯಾಲಯ ಹಾಗೂ ರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಕನಾಟಕದ ಈಜುಗಾರರಲ್ಲಿ ಮೈಸೂರಿನ ಕೊಡುಗೆ ಸಿಂಹಪಾಲು. ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ಈಜು ತರಬೇತಿ ಪಡೆದು ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರ ಮಟ್ಟದಲ್ಲಿ ಮಿನುಗಿದ ಈಜುಪಟುಗಳು ಮೈಸೂರಿನಲ್ಲಿದ್ದಾರೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ಕರ್ನಾಟಕ ಸರ್ಕಾರದ ಅಧೀನದಲ್ಲಿ ೧೯೬೯ರಂದು ಸ್ಥಾಪನೆಗೊಂಡಿತು. ಯುವಜನ ಸೇವ ಮತ್ತು ಕ್ರೀಡಾ ಇಲಾಖೆ ಪ್ರಾರಂಭದಲ್ಲಿ ಶಿಕ್ಷಣ ಇಲಾಖೆಯೊಂದಿಗೆ ಸಂಯೋಜಿತವಾಗಿ ಕೆಲಸ ನಿರ್ವಹಿಸುತ್ತಿತ್ತು. ೧೯೭೫ರಲ್ಲಿ ಸ್ವತಂತ್ರ ನಿರ್ದೇಶನಾಲಯವನ್ನು ಹೊಂದಿದ್ದರೂ ಕರ್ನಾಟಕ ಕ್ರೀಡಾಪರಿಷತ್ತಿನ ಎಲ್ಲಾ ನೌಕರರನ್ನೊಳಗೊಂಡಂತೆ ಸಂಪೂರ್ಣವಾದ ಅಧಿಕಾರ ಹಾಗೂ ನಿಯಮಾವಳಿಗಳನ್ನೊಳಗೊಂಡು ಕರ್ನಾಟಕದ ಯುವಜನ ಸೇವಾ ಮತ್ತು ಕ್ರೀಡಾ ಸಚಿವಾಲಯದಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲಾರಂಭಿಸಿತು (೧೯೮೦). ಮೈಸೂರು, ಬೆಂಗಳೂರು, ಬೆಳಗಾಂ, ಗುಲಬರ್ಗಾ ವಿಭಾಗದಲ್ಲಿ ವಿಭಾಗೀಯ ಜಂಟಿ ನಿರ್ದೇಶಕರುಗಳನ್ನೊಳಗೊಂಡು ಕಾರ್ಯನಿರ್ವಹಿಸುತ್ತಿದೆ. ಮೈಸೂರಿನಲ್ಲಿ ಸರ್ಕಾರ

ಚಾಮುಂಡೇಶ್ವರಿ ಕ್ರೀಡಾಂಗಣವನ್ನು ನಿರ್ಮಿಸಿ ಒಳಾಂಗಣ ಹಾಗೂ ಹೊರಾಂಗಣ ಕ್ರೀಡೆಗಳಿಗೆ ಉತ್ತೇಜಿಸುತ್ತಿದೆ. ಜೊತೆಗೆ ಮೈಸೂರು ನಗರದಲ್ಲಿ ಮೈಸೂರು ವಿಶ್ವವಿದ್ಯಾನಿಲಯವೂ ಸೇರಿದಂತೆ ಅನೇಕ ಸರ್ಕಾರಿ ಹಾಗೂ ಖಾಸಗೀ ಸಂಘಸಂಸ್ಥೆಗಳು ಕ್ರೀಡಾ ಶಾಲೆಗಳೂ ಕ್ರೀಡಾ ವಸತಿ ನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

**ರೀತಾಅಬ್ರಹಾಂ:** ಕರ್ನಾಟಕದ ಅಥ್‌ಲೆಟ್ ಆದ ಇವರು ೧೯೬೨, ಸೆಪ್ಟೆಂಬರ್ ೨೮ರಂದು, ಮೈಸೂರಿನಲ್ಲಿ ಜನಿಸಿದರು. ಇವರು ಮೈಸೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿ ಪಡೆದರು. ರಾಷ್ಟ್ರೀಯಮಟ್ಟದಲ್ಲಿ ಹಿಸ್ಸಾರ್‌ನಲ್ಲಿ ನಡೆದ ಅಂತರರಾಜ್ಯ ಕಿರಿಯ ಚಾಂಪಿಯನ್‌ಷಿಪ್‌ನ ಪೆಂಟಥ್ಲಾನ್‌ನಲ್ಲಿ ಚಿನ್ನದ ಪದಕ (೧೯೮೦) ಗೆದ್ದು ಬೆಳಕಿಗೆ ಬಂದರು. ಮರುವರ್ಷವೇ ಲಕ್ನೋದಲ್ಲಿ ನಡೆದ ರಾಷ್ಟ್ರೀಯ ಮುಕ್ತ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದರು. ಇವರು ರಾಷ್ಟ್ರೀಯ ಕ್ರೀಡೆ, ಮಾಸ್ಟರ್ಸ್ ಮೀಟ್, ಒಲಂಪಿಕ್ಸ್ ಹಾಗೂ ವಿಶ್ವ ಅಥ್ಲೆಟಿಕ್ ಸೇರಿ ರಾಷ್ಟ್ರಮಟ್ಟದಲ್ಲಿ ಒಟ್ಟು ೧೬ ಚಿನ್ನ, ೧೧ ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ. ಇವರು ಕಾರ್ಪೊರೇಷನ್ ಬ್ಯಾಂಕ್ ಉದ್ಯೋಗಿಯಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ ಕ್ರೀಡಾಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ಅರ್ಜುನ ಪ್ರಶಸ್ತಿಯಿಂದ ಪುರಸ್ಕರಿಸಿತು (೧೯೯೭). ಕರ್ನಾಟಕ ಸರ್ಕಾರದ ದಸರಾ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾದವು ಇವರಿಗೆ ಲಭಿಸಿವೆ.